# ಅನಂತಪಥ

ANANTHKUMAR PRATISHTHANA


ಪುಟ 4
ಅನಂತಕುಮಾರರ ಸಾಮಾಜಿಕ ಕಳಕಳಿ

ಗೋವಿಂದ ಕಾರಜೋಳ



ಸಂಪುಟ - 3 ಡಿಸೆಂಬರ್ - 2022 ಸಂಚಿಕೆ - 30

# ನಾಡಪ್ರಭು ಕೆಂಪೇಗೌಡರಿಗೆ ಅನಂತಕುಮಾರ್ ಸಲ್ಲಿಸಿದ ಗೌರವ

-ತೇಜಸ್ವಿನಿ ಅನಂತಕುಮಾರ್



ಗುಜರಾತಿನಲ್ಲಿರುವ ಸರ್ದಾರ್ ವಲ್ಲಭಭಾಯಿ ಪಟೇಲರ ಪ್ರತಿಮೆಯ ಮಾದರಿಯಲ್ಲಿಯೇ ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಭವ್ಯ ಪ್ರತಿಮೆಯನ್ನು ಮಾನ್ಯ ಪ್ರಧಾನಮಂತ್ರಿ, ನರೇಂದ್ರ ಮೋದಿಯವರು ಅನಾವರಣಗೊಳಿಸುವ ಮೂಲಕ ಕನ್ನಡಿಗರ ಹಲವು ದಶಕಗಳ ಕನಸೊಂದು ನನಸಾಯಿತು. ಆ ಸಂದರ್ಭದಲ್ಲಿ ಮಾನ್ಯ ಪ್ರಧಾನ ಮಂತ್ರಿ ಮತ್ತಿತರ ಗಣ್ಯರು ಕೆಂಪೇಗೌಡರ ಬಗ್ಗೆ ಆಡಿದ ಮಾತುಗಳು ಇಡೀ ಜಗತ್ತಿನ ಗಮನವನ್ನು ಸೆಳೆದವು. ಇತ್ತೀಚಿನ ದಿನಗಳಲ್ಲಿ ಕೆಂಪೇಗೌಡರನ್ನು ಬೆಂಗಳೂರಿನ ನಿರ್ಮಾತೃ ಎಂದು ಎಲ್ಲರೂ ಗುರುತಿಸುತ್ತಿರುವುದರಿಂದ ಅವರ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ.

ಬೆಂಗಳೂರಿನ ಸಂಸತ್ಸದಸ್ಯರಾಗಿ ಆರು ಬಾರಿ ಆಯ್ಕೆಯಾಗಿದ್ದ, ಕನ್ನಡದ ಕಣ್ಮಣಿ, ಅನಂತಕುಮಾರರು ಕೆಂಪೇಗೌಡರನ್ನು ಅಪಾರ ಶ್ರದ್ಧೆ, ಪ್ರೀತಿ ಮತ್ತು ಗೌರವಗಳಿಂದ ಯಾವಾಗಲೂ ಸ್ಮರಿಸಿಕೊಳ್ಳುತ್ತಿದ್ದರು. ಬೆಂಗಳೂರಿನಲ್ಲಿ ಯಾವುದೇ ಸಭೆಯಲ್ಲಿಯೂ ಕೆಂಪೇಗೌಡರ ಹೆಸರನ್ನು ಪ್ರಸ್ತಾಪಿಸದೆ ಭಾಷಣ ಮುಗಿಸಿದ ಸಂದರ್ಭಗಳೇ ಇಲ್ಲವೆನ್ನಬಹುದು.

ಅದರಲ್ಲಿಯೂ ನಗರದ ನೀರಿನ ಸಮಸ್ಯೆ, ನೀರಿನ ನಿರ್ವಹಣೆ, ನಗರ ವ್ಯವಸ್ಥೆ ಮುಂತಾದ ವಿಷಯಗಳು ಚರ್ಚೆಗೆ ಬಂದಾಗ ಸುಮಾರು ಐನೂರು ವರ್ಷಗಳ ಹಿಂದೆಯೇ ಕೆಂಪೇಗೌಡರು, ಬೆಂಗಳೂರಿನಲ್ಲಿ ಮತ್ತು ಅದರ ಸುತ್ತಮುತ್ತ ಏಳುನೂರು ಕೆರೆಗಳನ್ನು ಕಟ್ಟಿಸಿದ್ದಲ್ಲದೆ ಅವುಗಳನ್ನು ರಾಜಕಾಲುವೆಗಳ ಮೂಲಕ ಜೋಡಿಸಿ, ಮಳೆಯಿರಲಿ, ಇಲ್ಲದಿರಲಿ ಬೆಂಗಳೂರಿಗೆ ನೀರು ಸದಾ ಲಭ್ಯವಿರುವಂತೆ ಯೋಜಿಸಿದ್ದು ಒಂದು ಅದ್ಭುತ ಎಂದು ವರ್ಣಿಸುತ್ತಿದ್ದರು. ಜೊತೆಗೆ, ಪ್ರತಿಯೊಂದು ಕೆರೆಗೂ ಪ್ರತ್ಯೇಕ ಹೆಸರು ನೀಡಿದ್ದರು, ಕೆರೆಗಳ ಸುತ್ತ ಔಷಧಿ ಸಸ್ಯಗಳನ್ನು ಬೆಳೆಸುವ, ಕೆರೆಯ ನೀರು ಕಲುಷಿತವಾಗದ ಹಾಗೆ ನೋಡಿಕೊಳ್ಳುವ ವ್ಯವಸ್ಥೆಯನ್ನೂ ಮಾಡಿದ್ದರು, ನಗರಾಭಿವೃದ್ಧಿಯ ವ್ಯವಸ್ಥೆಗೆ ಕೆಂಪೇಗೌಡರೇ ಮಾದರಿ ಹಾಕಿಕೊಟ್ಟಿದ್ದಾರೆ ಎಂದೂ ಹೇಳುತ್ತಿದ್ದರು.

ಬೆಂಗಳೂರಿನ ಏರೋಸ್ಪೇಸ್ ಆಡಿಟೋರಿಯಂನಲ್ಲಿ ನಡೆದ ಒಂದು ಸಭೆಯಲ್ಲಿ ಬೆಂಗಳೂರಿನ ನೀರಿನ ಸಮಸ್ಯೆಯ ಬಗ್ಗೆ ಪ್ರಶ್ನೆ ಬಂದಿತ್ತು. ಆಗ ಅನಂತಕುಮಾರರು ಬೆಂಗಳೂರಿನ ಅನೇಕ ಪ್ರಮುಖ ಕೆರೆಗಳನ್ನು ನಾವು ಉಳಿಸಿಕೊಳ್ಳಲಾಗಲಿಲ್ಲ, ಅದರೆ, ತಾನು ಸಂಸತ್ಸದಸ್ಯನಾಗಿ ಆಯ್ಕೆಯಾದ ಮೇಲೆ ಅಂದರೆ 1996ರ ನಂತರ ಒಂದೂ ಕೆರೆಯನ್ನು ನಾಶಮಾಡಿ ಬಡಾವಣೆ ನಿರ್ಮಿಸಲು ಅವಕಾಶ ಮಾಡಿಕೊಟ್ಟಿಲ್ಲ ಎಂದು ಆತ್ಮವಿಶ್ವಾಸದಿಂದ ತಿಳಿಸಿದ್ದರು.

ದೆಹಲಿಯಲ್ಲಿ, ರಾಜ್ಯದಲ್ಲಿ ಅಥವಾ ಬಿಬಿಎಂಪಿ ಮಟ್ಟದಲ್ಲಿ ಕೆಂಪೇಗೌಡರ ಜಯಂತಿಯ ಆಚರಣೆ, ಕೆಂಪೇಗೌಡ ಪ್ರಶಸ್ತಿ ಪ್ರದಾನ, ಬೆಂಗಳೂರಿನ ಕರಗ ಮುಂತಾದ ಸಮಾರಂಭಗಳಲ್ಲಿ ಅನಂತಕುಮಾರ್ ವೈಯಕ್ತಿಕವಾಗಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಅವರು ಆ ಎಲ್ಲ ಉತ್ಸವಗಳಿಗೂ ಸರಕಾರದಿಂದ ಸೂಕ್ತ ಅನುದಾನ ಬರುವಂತೆ ನೋಡಿಕೊಂಡಿದ್ದಾರೆ. ಕೆಂಪೇಗೌಡರ ಹೆಸರು ದೇಶ ವಿದೇಶಗಳಲ್ಲಿ ಪ್ರಚಾರವಾಗಬೇಕೆಂಬ ಉದ್ದೇಶದಿಂದ ದೆಹಲಿಯಲ್ಲಿ ಎರಡು ದಿನಗಳ ಕೆಂಪೇಗೌಡರ ದಿನಾಚರಣೆಯನ್ನು ಆಯೋಜಿಸಿ, ಸಾಮಾನ್ಯ ಕಾರ್ಯಕರ್ತನಂತೆ ತಾವೇ ಮುಂದೆ ನಿಂತು ಸಮಾವೇಶದ ಎಲ್ಲ ವ್ಯವಸ್ಥೆಗಳನ್ನೂ ನೋಡಿಕೊಂಡಿದ್ದರು ಎಂಬುದನ್ನು ಆಚರಣೆಯ ಸಮಿತಿಯ ಎಲ್ಲಾ ಸದಸ್ಯರು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ಒಬ್ಬ ಸಮರ್ಥ, ಕುಶಲ ಆಡಳಿತಗಾರ ತನ್ನ ದೂರದರ್ಶಿತ್ವದಿಂದ ಮುಂದಿನ ಹಲವು ಶತಮಾನಗಳ ವರೆಗೆ ಸಮಾಜಕ್ಕೆ ಒಳಿತು ಮಾಡುವ ಬದಲಾವಣೆಗಳನ್ನು ತರಬಹುದು ಎಂಬುದಕ್ಕೆ ಕೆಂಪೇಗೌಡರು ಉತ್ತಮ ಉದಾಹರಣೆ. ಇವರ ಮಾದರಿಯನ್ನು ಎಲ್ಲರೂ ಅನುಸರಿಸುವಂತಾಗಬೇಕು, ಈ ನಿಟ್ಟಿನಲ್ಲಿ ದೇಶವಿದೇಶಗಳಿಂದ ಪ್ರತಿದಿನ ಸಾವಿರಾರು ಜನರು ಬಂದು ಹೋಗುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಯೇ ಅವರ ಪ್ರತಿಮೆಯನ್ನು ನಿಲ್ಲಿಸಲು ಅನುಮತಿ ದೊರಕಿಸಿಕೊಡುವುದರ ಜೊತೆಗೆ 1998 – 1999ರಲ್ಲಿ ವಿಮಾನಯಾನ ಸಚಿವರಾಗಿದ್ದಾಗ ಅದಕ್ಕೆ ಸೂಕ್ತ ನಿವೇಶನವನ್ನೂ ಗುರುತಿಸಿಕೊಟ್ಟರು. ನಂತರ, ವಿಮಾನ ನಿಲ್ದಾಣ ಸಂಪೂರ್ಣವಾಗಿ ಕಾರ್ಯಾರಂಭ ಮಾಡಿದಾಗ ಅದಕ್ಕೆ ಕೆಂಪೇಗೌಡರ ಹೆಸರನ್ನು ಸೂಚಿಸಿ, ಅದಕ್ಕೆ ಸೂಕ್ತ ನಿರ್ಣಯ ತೆಗೆದುಕೊಳ್ಳಲೂ ಅನಂತಕುಮಾರರೇ ಕಾರಣರು. ನಾಡಪ್ರಭು ಕೆಂಪೇಗೌಡರ ಹೆಸರನ್ನು ದೇಶವಿದೇಶಗಳಲ್ಲಿ ಪ್ರಚುರಪಡಿಸಿದ ಅನಂತಕುಮಾರರನ್ನು ಕನ್ನಡಿಗರು ಸದಾ ನೆನಪಿನಲ್ಲಿರಿಸಿಕೊಳ್ಳುತ್ತಾರೆ. ●






ಅನಂತ ಪಥ ಮಾಸ ಪತ್ರಿಕೆಯ 29 ನೇ ಸಂಚಿಕೆಯನ್ನು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ಶ್ರೀ ಬಸವರಾಜ ಪಾಟೀಲ್ ಸೇಡಂ ಅವರು ಕಲಬುರಗಿಯ ಅರಿವಿನ ಮನೆ ಸಭಾಂಗಣದಲ್ಲಿ 22 ನವೆಂಬರ್ 2022 ರಂದು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸರ್ವಶ್ರೀ ಪ್ರೊ. ಪಿ.ವಿ. ಕೃಷ್ಣ ಭಟ್, ದಯಾಘನ್ ಧಾರವಾಡಕರ್, ಅವಿನಾಶ್ ಕುಲಕರ್ಣಿ, ವಿದ್ಯಾಸಾಗರ ಶಾಬಾದಿ, ಅಮರನಾಥ ಪಾಟೀಲ್, ಶಶೀಲ್ ನಮೋಶಿ, ರಾಜಕುಮಾರ ಪಾಟೀಲ್ ಸೇಡಂ, ಬಿ.ಜಿ ಪಾಟೀಲ್, ದೊಡ್ಡಪ್ಪಾ ಗೌಡ ಪಾಟೀಲ್, ಶಂಭುಲಿಂಗ್ ಪಾಟೀಲ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ಕೆಲವು ಪ್ರಾಚೀನ ದೇವಾಲಯಗಳು

**ದೇಗುಲದರ್ಶನ ಮಾಲಿಕೆ - 17**

ದೇಗುಲದರ್ಶನ ಮಾಲಿಕೆಯ ಈ ತಿಂಗಳ ಕಾರ್ಯಕ್ರಮದಲ್ಲಿ ನಾವು ಮಂಡ್ಯ ಜಿಲ್ಲೆಯ ಮದ್ದೂರಿನಿಂದ ಚಾಮರಾಜನಗರದ ಯಳಂದೂರಿನವರೆಗೆ ಹಲವು ಪುರಾತನ ದೇವಾಲಯಗಳ ಪರಿಚಯಮಾಡಿಕೊಳ್ಳೋಣ.

ಮದ್ದೂರಿನ ಉಗ್ರನರಸಿಂಹ ದೇವಾಲಯ ಚೋಳ, ಹೊಯ್ಸಳ ಸಾಮ್ರಾಜ್ಯಗಳ ಕಾಲದಿಂದಲೂ ಪ್ರಸಿದ್ಧಿ ಪಡೆದಿರುವ ಕ್ಷೇತ್ರ. ಹಿರಣ್ಯಕಶಿಪುವನ್ನು ತೊಡೆಯ ಮೇಲಿರಿಸಿಕೊಂಡು ಸಂಹರಿಸುತ್ತಿರುವ ನರಸಿಂಹನ ಶಿಲ್ಪ ಭವ್ಯವಾಗಿದೆ. ನವೀಕೃತವಾದ ದೇಗುಲದ ಆವರಣದಲ್ಲಿ ಪ್ರತ್ಯೇಕ ಗುಡಿಯಲ್ಲಿರುವ ಲಕ್ಷ್ಮಣ ಹನುಮಸಮೇತ ಶ್ರೀ ಸೀತಾರಾಮ ವಿಗ್ರಹಗಳು ಆಕರ್ಷಕವಾಗಿವೆ. ತನ್ನ ಬಾಯಿಗೆ ಕೈಯನ್ನು ಅಡ್ಡವಾಗಿಟ್ಟುಕೊಂಡು ನಿಂತ ಹನುಮನ ಭಂಗಿ ವಿಶೇಷವಾಗಿ ಗಮನ ಸೆಳೆಯುವಂತಿದೆ. ಇದೇ ದೇವಾಲಯದ ಸಂಕೀರ್ಣದಲ್ಲಿರುವ ವರದರಾಜಸ್ವಾಮಿಯ ದೇಗುಲ ದರ್ಶನೀಯವಾದುದು. ಹೊಯ್ಸಳ ಅರಸ ವಿಷ್ಣುವರ್ಧನನಿಂದ ಪ್ರತಿಷ್ಠಾಪಿತವಾದ ವರದರಾಜಸ್ವಾಮಿಯ ಎತ್ತರವಾದ ವಿಗ್ರಹ ಅತ್ಯಾಕರ್ಷಕವಾಗಿದೆ.

ಮದ್ದೂರಿನಿಂದ 15 ಕಿಮೀಗಳ ದೂರದಲ್ಲಿರುವ ಮಳವಳ್ಳಿ ಟಿಪ್ಪೂ ಸುಲ್ತಾನನ ಕಾಲದಲ್ಲಿ ಸೇನಾ ಚಟುವಟಿಕೆಗಳ ಕೇಂದ್ರವಾಗಿದ್ದ ತಾಣ. ಇಲ್ಲಿರುವ ಪ್ರಮುಖ ದೇವಾಲಯಗಳಲ್ಲಿ ಶಾರ್ಙ್ಗಪಾಣಿ, ಅರಕೇಶ್ವರ, ಗಂಗಾಧರೇಶ್ವರ, ವೀರಭದ್ರ, ಆಂಜನೇಯ, ಪಟಾಲದಮ್ಮ ಮೊದಲಾದವನ್ನು ಹೆಸರಿಸಬಹುದು. 17 ನೇ ಶತಮಾನದಲ್ಲಿ ಮೈಸೂರು ಅರಸರಾದ ದೇವರಾಜ ಭೂಪಾಲರಿಂದ ಜೀರ್ಣೋದ್ಧಾರಗೊಂಡ ಗಂಗಾಧರೇಶ್ವರನ ದೇವಾಲಯದಲ್ಲಿ ಚೋಳರ ಕಾಲದ್ದೆನ್ನಲಾದ ಶಿವಲಿಂಗ ಭವ್ಯವಾಗಿದೆ. ನವರಂಗದಲ್ಲಿರುವ ವಿಗ್ರಹಗಳಲ್ಲಿ ಗಣಪತಿ, ಸೂರ್ಯ, ಪಾರ್ವತಿ, ಶೂಲಧಾರಿ ಕಾರ್ತಿಕೇಯ, ಮಹಿಷಮರ್ದಿನಿಯರ ವಿಗ್ರಹಗಳು ಅಧ್ಯಯನಾಸಕ್ತರಿಗೆ ಕುತೂಹಲ ಮೂಡಿಸುವಂತಿವೆ. ಊರ ಹೊರಗೆ ರುದ್ರಭೂಮಿಗೆ ಹೊಂದಿಕೊಂಡಂತಿರುವ ಅರಕೇಶ್ವರ ದೇವಾಲಯದಲ್ಲಿರುವ ಎತ್ತರವಾದ ಶಿವಲಿಂಗವೂ ಪುರಾತನವಾದುದು.







ಮಳವಳ್ಳಿಯಿಂದ ದಕ್ಷಿಣಕ್ಕೆ ಎರಡು ಕಿಮೀ ದೂರದಲ್ಲಿರುವ ಮಾರೇಹಳ್ಳಿಯಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯವು ರಾಜರಾಜ ಚೋಳನ ಕಾಲದ್ದೆಂದು ಹೇಳಲಾಗಿದೆ. ಗರ್ಭಗುಡಿಯಲ್ಲಿರುವ ಸೌಮ್ಯರೂಪದ ಲಕ್ಷ್ಮೀನರಸಿಂಹ ವಿಗ್ರಹವು ಮನೋಹರವಾಗಿದೆ. ಗರ್ಭಗುಡಿಯ ಇಕ್ಕೆಲಗಳಲ್ಲಿ ಪ್ರದಕ್ಷಿಣಾಪಥಕ್ಕೆ ಹೊಂದಿಕೊಂಡಂತೆ ಚಿಕ್ಕ ಗುಡಿಗಳಿದ್ದು ಭೂದೇವಿ ಮತ್ತು ನೀಳಾದೇವಿಯರು ಪ್ರತಿಷ್ಠಾಪಿತರಾಗಿದ್ದಾರೆ. ಕೊಳ್ಳೇಗಾಲಕ್ಕೆ ಹೋಗುವ ರಸ್ತೆಯ ಇನ್ನೊಂದು ಬದಿಯಲ್ಲಿ ಅಮೃತೇಶ್ವರನೆಂಬ ಒಂದು ಪುರಾತನ ಶಿವಾಲಯವಿದ್ದು ಇತ್ತೀಚೆಗೆ ಜೀರ್ಣೋದ್ಧಾರಮಾಡಲಾಗಿದೆ.


ಕೊಳ್ಳೇಗಾಲದಲ್ಲಿ ಲಕ್ಷ್ಮೀನಾರಾಯಣ, ಶಿವ, ಗಣಪತಿ, ಚೌಡೇಶ್ವರಿ ಮೊದಲಾದ ದೇವಾಲಯಗಳಿವೆ. ಇವುಗಳಲ್ಲಿ ಲಕ್ಷ್ಮೀನಾರಾಯಣ ದೇವಾಲಯವನ್ನು ಚೋಳರ ಆಳ್ವಿಕೆಯ ಕಾಲದಲ್ಲಿ ಕಟ್ಟಿರಬಹುದೆಂದು ಊಹಿಸಲಾಗಿದೆ. ಮುಖ್ಯ ಗರ್ಭಗುಡಿಯಲ್ಲಿ ಶ್ರೀದೇವಿಭೂದೇವಿಯರೊಡಗೂಡಿದ ನಾರಾಯಣನ ಶಿಲ್ಪವಿದೆ. ಎಡಬದಿಯಲ್ಲಿ ಸೌಮ್ಯನಾಯಕಿ ಅಮ್ಮನವರ ದೇಗುಲವಿದೆ. ಗುಡಿಯ ಎಡದಲ್ಲಿ ಕಾಳಿಂಗಮರ್ದನ ಕೃಷ್ಣನ ವಿಗ್ರಹವಿದ್ದರೆ ಬಲಭಾಗದ ಕೋಷ್ಠದಲ್ಲಿ ಶ್ರೀವೈಷ್ಣವ ಆಚಾರ್ಯರಾದ ವೇದಾಂತದೇಶಿಕರ ವಿಗ್ರಹವಿದೆ. ವೇದಾಂತ ದೇಶಿಕರು ಕೊಳ್ಳೇಗಾಲ ಸತ್ಯಗಾಲ ಪ್ರಾಂತ್ಯದಲ್ಲಿ ಕೆಲಕಾಲ ತಂಗಿದ್ದರೆಂಬ ಚಾರಿತ್ರಿಕ ಉಲ್ಲೇಖಗಳಿವೆ.


ಅಗರ - ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಒಂದು ಗ್ರಾಮ. ಚೋಳ ಕುಲೋತ್ತುಂಗನ ಆಳ್ವಿಕೆಯ ಕಾಲದಲ್ಲಿ ಅಗರವು ಮಾನ್ಯತೆ ಪಡೆದ ಊರೆನಿಸಿತ್ತು. ಹತ್ತನೆಯ ಶತಮಾನದಲ್ಲಿ ನಿರ್ಮಾಣಗೊಂಡ ನರಸಿಂಹನ ದೇಗುಲವು ಇಲ್ಲಿನ ಅತಿ ಪುರಾತನ ದೇವಾಲಯ. ರಾಮೇಶ್ವರ, ದುರ್ಗಾ, ವರದರಾಜ ದೇವಾಲಯಗಳು ಇಲ್ಲಿರುವ ಇತರ ಮುಖ್ಯ ಗುಡಿಗಳು. ನರಸಿಂಹ ದೇವಾಲಯದ ಗರ್ಭಗುಡಿಯು ಗಜಪೃಷ್ಠಾಕಾರದ ರೀತಿಯ ದುಂಡಗಿನ ರಚನೆಯಾಗಿದೆ. ಇನ್ನೊಂದು ವಿಶೇಷವೇನೆಂದರೆ ಇಲ್ಲಿ ಸ್ಥಾಪಿತವಾಗಿರುವ ವಿಗ್ರಹವನ್ನು ಪಂಚರೂಪಿ ನರಸಿಂಹನೆಂದು ಗುರುತಿಸಲಾಗುತ್ತಿದೆ.

ದುರ್ಗಾದೇವಾಲಯದ ಒಳಗುಡಿಯಲ್ಲಿರುವ ಎತ್ತರವಾದ ದೇವಿಯ ಶಿಲ್ಪ ವೈಷ್ಣವಿ ದುರ್ಗೆಯನ್ನು ಬಿಂಬಿಸುತ್ತದೆ. ಮೇಲುಗೈಗಳಲ್ಲಿ ಚಕ್ರ, ಶಂಖಗಳನ್ನು ಹಿಡಿದಿರುವ ದೇವಿಯ ಬಲಗೈ ಅಭಯಹಸ್ತವಾಗಿದ್ದು, ಎಡಗೈ ಸೊಂಟದ ಮೇಲಿದೆ. ರಾಮೇಶ್ವರ ದೇವಾಲಯವನ್ನೂ ಇತ್ತೀಚೆಗೆ ನವೀಕರಿಸಲಾಗಿದ್ದು ಗರ್ಭಗುಡಿಯಲ್ಲಿ ಪುರಾತನ ಶಿವಲಿಂಗವಿದೆ. ನವರಂಗದಲ್ಲಿ ನಂದಿ, ಸೂರ್ಯ, ದಕ್ಷಿಣಾಮೂರ್ತಿ, ಗಣಪತಿ ಹಾಗೂ ವಿಷ್ಣುವಿನ ಪ್ರಾಚೀನವಿಗ್ರಹಗಳಿವೆ.

ಯಳಂದೂರಿನ ಗೌರೀಶ್ವರ ದೇವಾಲಯವನ್ನು ಹದಿನಾಡಿನ ದೊರೆ ಸಿಂಗಿದೇವನು 1450 ರಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ವಿಜಯನಗರದ ಕಾಲದಲ್ಲಿ ನಿರ್ಮಿತವಾದ ಈ ದೇಗುಲವು ವಿಜಯನಗರ ಶಿಲ್ಪಶೈಲಿಯ ಎಲ್ಲ ಉತ್ಕೃಷ್ಟ ಲಕ್ಷಣಗಳನ್ನೂ ಹೊಂದಿದೆ ಎಂದರೆ ತಪ್ಪಾಗಲಾರದು. ಬಳೆಮಂಟಪ ಎಂದು ಪರಿಚಿತವಾದ ದೇವಾಲಯದ ದ್ವಾರಮಂಟಪದ ಅಂಚುಗಳಲ್ಲಿ ತಲಾ ನಾಲ್ಕು ಕಲ್ಲಿನ ಬಳೆಗಳನ್ನು ಪೋಣಿಸಿದಂತೆ ತೂಗುಬಿಡಲಾಗಿರುವುದೊಂದು ಅಚ್ಚರಿ. ಗರ್ಭಗುಡಿಯಲ್ಲಿ ಗೌರೀಶ್ವರನೆಂಬ ಹೆಸರಿನ ಶಿವಲಿಂಗವಿದ್ದು ನಿತ್ಯಪೂಜೆ ಸಲ್ಲುತ್ತಿದೆ. ಈ ದೇವಾಲಯದ ಸನಿಹದಲ್ಲೇ ವರಾಹಸ್ವಾಮಿಯ ದೇವಸ್ಥಾನವಿದೆ. ಇಲ್ಲಿ ಲಕ್ಷ್ಮಿಯನ್ನು ತನ್ನ ಎಡತೊಡೆಯ ಮೇಲಿರಿಸಿಕೊಂಡಿರುವ ವರಾಹರೂಪಿ ವಿಷ್ಣುವಿನ ವಿಗ್ರಹವಿದೆ.

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ** ●











ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ನೋಡಲು ಬೇಕಾದ ಲಿಂಕ್ ಇಲ್ಲಿದೆ: http://YouTube.com/AnanthkumarPratishthana

# ಗವಿಪುರದಲ್ಲಿ ಸಮ್ಮೋಹನಾಸ್ತ್ರ




ಇದು ಹದಿನೆಂಟನೆಯ ಶತಮಾನದ ಕಥೆ. ೧೭೪೭ರ ಕಾಲಕ್ಕೆ ವೆಂಕಟರಮಣಯ್ಯ ಎಂಬ ಮಹನೀಯರು ಹೈದರ್ ಅಲಿಯ ಸೇನೆಯಲ್ಲಿ ಕೆಲಸ ಮಾಡುತ್ತಿದ್ದರು. ಹೈದರನ ಮರಣಾನಂತರ ಟಿಪ್ಪೂ ಸುಲ್ತಾನ ತನ್ನ ಸೇನೆಯಲ್ಲಿದ್ದ ಹಿಂದೂ ಅಧಿಕಾರಿಗಳೊಡನೆ ಸರಿಯಾಗಿ ವರ್ತಿಸುತ್ತಿರಲಿಲ್ಲ. ಹಾಗಾಗಿ ವೆಂಕಟರಮಣಯ್ಯನವರು ದಿವಾನ್ ಪೂರ್ಣಯ್ಯನವರ ಸಲಹೆಯ ಮೇರೆಗೆ ಕಿಕ್ಕೇರಿಯ ತಹಸೀಲ್ದಾರರಾಗಿ ನೇಮಕಗೊಂಡು ಹೊರಟುಬಿಟ್ಟರು. ಉದ್ಯೋಗದಿಂದ ನಿವೃತ್ತರಾದ ಮೇಲೆ ಅವರು ಬೆಂಗಳೂರು ದೇವನಹಳ್ಳಿ ಸಮೀಪದ ಹೊನ್ನಾವರದಲ್ಲಿ ನೆಲೆಸಿದ್ದರು.

ಅವರಿಗೆ ಇಬ್ಬರು ಹೆಂಡತಿಯರು. ಅವರ ಎರಡನೇ ಹೆಂಡತಿ ನರಸಮ್ಮನವರ ಮಗನಾಗಿ ೧೮೧೬ರಲ್ಲಿ ಜನಿಸಿದ ಗೋಪಾಲರಾವ್ ಇಡೀ ವಂಶದಲ್ಲಿ ಎಲ್ಲರಿಗಿಂತ ಹೆಚ್ಚು ವಿದ್ಯಾವಂತರೂ ಬಹಳ ಅದೃಷ್ಟವಂತರೂ ಆಗಿದ್ದರು. ಇಂಗ್ಲಿಷ್ ಸೇರಿದಂತೆ ಹತ್ತು ಭಾಷೆಗಳಲ್ಲಿ ಮಾತನಾಡಬಲ್ಲವರಾಗಿದ್ದರು. ಅಂದಿನ ಬ್ರಿಟಿಷ್ ಆಡಳಿತಕಾಲದಲ್ಲಿ ಅದು ನಿಜಕ್ಕೂ ಒಂದು ವಿಶೇಷವಾದ ಸಾಧನೆಯಾಗಿತ್ತು.

ಗೋಪಾಲರಾವ್ ತಮ್ಮ ವಿಶ್ವಸನೀಯ ಗುಣ ಹಾಗೂ ಉದಾರ ಸ್ವಭಾವಕ್ಕೆ ಚಿರಪರಿಚಿತರಾಗಿದ್ದರು. ಅವರು ದಣಿವೇ ಇಲ್ಲದಂತೆ ಸದಾ ಓಡಾಡುತ್ತಿದ್ದರು, ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದರು, ಧೈರ್ಯಶಾಲಿ ಹಾಗೂ ಮುಕ್ತ ಮನಸ್ಸಿನವರಾಗಿದ್ದರು. ಅವರ ಬಳಿ ಹಲವಾರು ವಿಚಾರಗಳ ಬಗ್ಗೆ ಹೇರಳವಾದ ಕುತೂಹಲಕಾರಿ ಮಾಹಿತಿಯಿತ್ತು. ಕೇಳುಗರಿಗೆ ಅವರ ಜೀವನದ ಘಟನೆಗಳ ಮತ್ತು ಶ್ರೇಷ್ಠ ವ್ಯಕ್ತಿಗಳ ಕತೆಗಳನ್ನು ಹೇಳುತ್ತಾ ಆಶ್ಚರ್ಯಚಕಿತರನ್ನಾಗಿ ಮಾಡುತ್ತಿದ್ದರು. ಹಲವಾರು ಹುದ್ದೆಗಳನ್ನು ಅಲಂಕರಿಸಿದ್ದ ಅವರು ಶಿರಸ್ತೇದಾರ್, ಪೊಲೀಸ್ ಮುಖ್ಯಸ್ಥ ಮತ್ತು ತಹಸೀಲ್ದಾರರಾಗಿ ಕಾರ್ಯ ನಿರ್ವಹಿಸಿದರು. ಕಡೆಯಲ್ಲಿ ಅವರು ಪಾರ್ಲಿಕಿಮಿಡಿ ಜಮೀನ್ದಾರರ ದಿವಾನರಾಗಿ ನೇಮಕಗೊಂಡರು.

ಗೋಪಾಲರಾಯರು ಪ್ರಜ್ಞಾವಂತರು; ಅತ್ಯಂತ ಧರ್ಮನಿಷ್ಠೆಯುಳ್ಳವರು. ವಿಶೇಷವೆಂದರೆ ಅವರು ಮಂತ್ರ ಶಾಸ್ತ್ರದಲ್ಲಿ ನಿಪುಣರಾಗಿದ್ದ ವ್ಯಕ್ತಿಯಾಗಿದ್ದರು. ಅವರು ಜನಕ ಮಹಾರಾಜನ ತರಹ ಒಬ್ಬ ನೈಜ ರಾಜ ಯೋಗಿಯಾಗಿದ್ದರು. ಅವರ ಆಧ್ಯಾತ್ಮಿಕ ಶಕ್ತಿ ಉನ್ನತ ಮಟ್ಟದ್ದಾಗಿತ್ತು; ಅವರಿಗೆ ಪ್ರಾಕೃತಿಕ ಶಕ್ತಿಗಳ ಮೇಲೆ ಹಿಡಿತವಿತ್ತು. ಅವರು ವಸ್ತುತಃ ಮೋಹನ, ಸ್ತಂಭ, ಪಾಶುಪತ ಮತ್ತು ಇತರ ಕ್ಷಿಪಣಿಗಳಂಥ ಅಸ್ತ್ರಗಳನ್ನು ಪ್ರಯೋಗಿಸಬಲ್ಲವರಾಗಿದ್ದರು.

ಅವರು ನಿಧನರಾಗುವ ಮೊದಲು ಎರಡು ಮೂರು ವರ್ಷಗಳ ಹಿಂದೆ ತಮಗಿದ್ದ ಈ ಅದ್ಭುತ ಶಕ್ತಿಯ ಒಂದು ಪ್ರದರ್ಶನವನ್ನು ಬೆಂಗಳೂರಿನ ಗವಿಪುರಂನಲ್ಲಿ ತಮ್ಮ ಕೆಲವು ಸ್ನೇಹಿತರು ಮತ್ತು ಅಭಿಮಾನಿಗಳ ಮುಂದೆ ಪ್ರದರ್ಶಿಸಿದರು. ಈ ಶಕ್ತಿಯ ಬಗ್ಗೆ ಅಂದು ಹಾಜರಿದ್ದ ಕೆಲವು ಗೌರವಾನ್ವಿತ ಧಾರ್ಮಿಕ ವ್ಯಕ್ತಿಗಳು ದೃಢೀಕರಿಸಿದ್ದಾರಂತೆ. ಪುಟ 5 ರಲ್ಲಿ ಮುಂದುವರೆದಿದೆ



## ಅನಂತಯಾನ

### ಅಧ್ಯಾಯ- 6

ನಿರೂಪಣೆ : ಟಿ.ಎಸ್. ಗೋಪಾಲ್

# ಅನಂತಕುಮಾರರ ಸಾಮಾಜಿಕ ಕಳಕಳಿ



**ಗೋವಿಂದ ಕಾರಜೋಳ**
**ಜಲ ಸಂಪನ್ಮೂಲ ಸಚಿವರು**

ಅನಂತಕುಮಾರರು ರಾಷ್ಟ್ರಮಟ್ಟದ ರಾಜಕೀಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ಮೇಲೆಯೂ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ವಿಶೇಷ ಕಳಕಳಿ ಹೊಂದಿದ್ದರು. ತಮ್ಮ ಕಾರ್ಯಕಾಲದಲ್ಲಿ ಬಹಳ ಅದ್ಭುತವಾದ ಕೆಲಸಗಳನ್ನು ಮಾಡುವುದರ ಮೂಲಕ ತಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಅವರ ಪೂರ್ವಜರು ಬೆಂಗಳೂರಿನ ಸುತ್ತಮುತ್ತ ಇದ್ದವರು ಎಂದು ಹೇಳುತ್ತಾರೆ. ಆದರೆ ಅವರು ಹುಟ್ಟಿ ಬೆಳೆದಿದ್ದು ಹುಬ್ಬಳ್ಳಿಯ ಎಂಟಿಎಸ್ ಕಾಲೋನಿಯಲ್ಲಿ. ಆದರೆ ಬಾಲ್ಯದಲ್ಲಿಯೇ ಬೆಂಗಳೂರಿಗೆ ಬಂದು ಸಂಘಟನೆಯಲ್ಲಿ ಭಾಗವಹಿಸಿ, ಪಕ್ಷದ ಕೆಲಸ ಕಾರ್ಯಗಳನ್ನು ಮಾಡುವುದರ ಮೂಲಕ ಜನಮನ್ನಣೆ ಗಳಿಸಿ ಆರು ಬಾರಿ ಸಂಸದರಾಗಿ ಆಯ್ಕೆಯಾಗಿ, ಕೇಂದ್ರದಲ್ಲಿ ಮಂತ್ರಿಯಾಗಿ ಬಹಳ ಅದ್ಭುತವಾದ ಯಶಸ್ಸನ್ನು ಗಳಿಸಿದ್ದಾರೆ.

ನಾವು ಅನಂತಕುಮಾರರ ಚೇಂಬರಿಗೆ ಹೋಗಿ ಕುಳಿತಿದ್ದಾಗ ದೇಶದ ಎಲ್ಲ ಸಂಸದರು ಅವರ ಹತ್ತಿರ ಬಂದು ಆತ್ಮೀಯವಾಗಿ ಮಾತನಾಡುತ್ತಿದ್ದುದನ್ನು ಗಮನಿಸಿದ್ದೇವೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು, ಕಾರ್ಯದರ್ಶಿಗಳನ್ನು ತಮ್ಮ ಚೇಂಬರಿಗೆ ಕರೆದು ಕೆಲಸ ಮಾಡಿಸಿಕೊಡುವಂತಹ ವಿಶಿಷ್ಟ ಶಕ್ತಿ ಅವರಿಗಿತ್ತು. ಅವರು ಕೆಲವು ಮಂತ್ರಿಗಳನ್ನೂ ಕೂಡ ತಮ್ಮ ಚೇಂಬರಿಗೆ ಕರೆದು ಕೆಲಸ ಮಾಡಿಸಿಕೊಡುತ್ತಿದ್ದರು. ಸಾಮಾಜಿಕ ಕಳಕಳಿ ಎಂದರೆ ಏನೆಂಬುದನ್ನು ನಾವು ಅನಂತಕುಮಾರರಿಂದ ಕಲಿಯಬೇಕಿದೆ. ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರದಲ್ಲಿ ಮಂತ್ರಿ ಆದ ಸಂದರ್ಭದಲ್ಲಿ, ಕೊಳೆಗೇರಿಗಳಲ್ಲಿ ವಾಸ ಮಾಡುತ್ತಿದ್ದ ಬಡವರಿಗಾಗಿ ವಾಲ್ಮೀಕಿ- ಅಂಬೇಡ್ಕರ್ ವಸತಿ ಯೋಜನೆಯನ್ನು ರಾಷ್ಟ್ರ ಮಟ್ಟದಲ್ಲಿ ಜಾರಿಗೆ ತಂದು ಬಡವರಿಗೆ ಬಾಳಿಗೆ ಗೌರವ ದೊರಕಿಸಿದರು. ಅನೇಕ ಬಾರಿ ನನ್ನೊಡನೆ ತಾಸುಗಟ್ಟಲೆ ಕುಳಿತು ದಲಿತರ ಶ್ರೇಯಸ್ಸಿಗಾಗಿ ಏನು ಮಾಡಬಹುದೆಂದು ಚರ್ಚಿಸುತ್ತಿದ್ದರು. ನಮ್ಮ ಬಳಿ ಅವರು ಸಾಮಾಜಿಕ ನ್ಯಾಯದ ಬಗ್ಗೆಯೇ ಹೆಚ್ಚಾಗಿ ಮಾತನಾಡುತ್ತಿದ್ದರು.

ಅನಂತಕುಮಾರರು ತಮ್ಮ ಸಾಮಾಜಿಕ ಕಳಕಳಿಯ ದ್ಯೋತಕವಾಗಿ ಅದಮ್ಯ ಚೇತನ ಸಂಸ್ಥೆಯನ್ನು ಪ್ರಾರಂಭಿಸಿದರು. ಸರಕಾರಿ ಶಾಲೆಗಳಲ್ಲಿ ಓದುತ್ತಿರುವ ಲಕ್ಷಾಂತರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸಿದರು.

ಅವರು ಕೇವಲ ಪಕ್ಷದ ಹಿರಿಯರ ಕಾರ್ಯವೈಖರಿ ಬಗ್ಗೆ ಮಾತ್ರವಲ್ಲ, ಹಿಂದೆ ಆಗಿ ಹೋದ ಹಿರಿಯ ರಾಜಕಾರಣಿಗಳ ಕಾರ್ಯಶೈಲಿಯನ್ನೂ ಅಧ್ಯಯನ ಮಾಡುತ್ತಿದ್ದರು. ವಾಜಪೇಯಿ, ಅದ್ವಾನಿ, ನರೇಂದ್ರ ಮೋದಿ ಮುಂತಾದ ಅನೇಕ ಹಿರಿಯರ ಜೊತೆ ಅವರಿಗೆ ಆತ್ಮೀಯ ಒಡನಾಟವಿತ್ತು. ಅನಂತಕುಮಾರರು ಪ್ರಾರಂಭಿಸಿದ ಎಲ್ಲಾ ಸೇವಾ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ. ●

**ಅದಮ್ಯ ಚೇತನ**
**ADAMYA CHETANA**

Azadi Ka Amrit Mahotsav

## ಅಮೃತ ಮಹೋತ್ಸವ
## ಅನಂತ ಸೇವಾ ಉತ್ಸವ

**31-12-2022 & 01-01-2023**

**ದಿನಾಂಕ : 31-12-2022, ಶನಿವಾರ**

ಬೆಳಗ್ಗೆ 10.00 : ಅನಂತ ಸೇವಾ ಉತ್ಸವದ ಉದ್ಘಾಟನೆ

ಬೆಳಗ್ಗೆ 11.00 ರಿಂದ ರಾತ್ರಿ 9.00 ರವರೆಗೆ ನಾಡಿನ ಹೆಸರಾಂತ ಕಲಾವಿದರಿಂದ ಹಾಗೂ ಶಾಲಾ ಮಕ್ಕಳಿಂದ ಸಂಗೀತ, ನೃತ್ಯ, ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳು

ರಾತ್ರಿ 9.00 ರಿಂದ 12.00 ರವರೆಗೆ 'ಯಕ್ಷಗಾನ'

ಮಧ್ಯರಾತ್ರಿ 12.00 : ಹೊಸ ವರ್ಷದ ಸಂಕಲ್ಪ

**ದಿನಾಂಕ : 01-01-2023, ಭಾನುವಾರ**

ಬೆಳಗ್ಗೆ 10.00 ರಿಂದ ಸಂಜೆ 4.00 ರವರೆಗೆ ನಾಡಿನ ಹೆಸರಾಂತ ಕಲಾವಿದರಿಂದ ಹಾಗೂ ಶಾಲಾ ಮಕ್ಕಳಿಂದ ಸಂಗೀತ, ನೃತ್ಯ, ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳು

ಸಂಜೆ 4.00 : ಸಹಸ್ರಾರು ಕಂಠಗಳಿಂದ
ಗೀತ ಸಮರ್ಪಣೆ ಮತ್ತು ಅಖಂಡ ವಂದೇ ಮಾತರಂ

ಸಂಜೆ 5.00 ರಿಂದ 7.00 ರವರೆಗೆ ನಾಡಿನ ಹೆಸರಾಂತ ಕಲಾವಿದರಿಂದ ಸಂಗೀತ, ನೃತ್ಯ, ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳು

**ಮಗಜಿ ಧೋಂಡೂಸಾ ಸಭಾಂಗಣ,**
**ಅದಮ್ಯ ಚೇತನದ ಎದುರು,**
**ಗವಿಪುರ, ಬೆಂಗಳೂರು**

ಉತ್ಸವದ ಇತರ ವಿಶೇಷತೆಗಳು :

ಪ್ರದರ್ಶಿನಿಗಳು :
- 75 ಸ್ವಾತಂತ್ರ್ಯ ಹೋರಾಟಗಾರರ ಚಿತ್ರ ಪ್ರದರ್ಶಿನಿ
- 75 ಸಸ್ಯಗಳ ಮಾಹಿತಿ ಪ್ರದರ್ಶಿನಿ
- 75 ದೇವಾಲಯಗಳ ಚಿತ್ರ-ಮಾಹಿತಿ ಪ್ರದರ್ಶಿನಿ

ಸ್ಥಳದಲ್ಲೇ ನಡೆಯುವ ಸ್ಪರ್ಧೆಗಳು
ಆಹಾರ ಮಳಿಗೆಗಳು
ಮಾರಾಟ ಮಳಿಗೆಗಳು

**ಬನ್ನಿ, ಭಾಗವಹಿಸಿ...ದೇಶ ಸೇವೆಯ ಸಂಕಲ್ಪ ಮಾಡೋಣ**

# ಶಿಕ್ಷಣ ಮತ್ತು ಸಾಮಾಜಿಕ ಜವಾಬ್ದಾರಿ

**ನ್ಯಾ. ಎನ್. ಕುಮಾರ್**
ನಿವೃತ್ತ ನ್ಯಾಯಮೂರ್ತಿ, ಕರ್ನಾಟಕ ಉಚ್ಚ ನ್ಯಾಯಾಲಯ



ಅನಂತ ಸ್ಮರಣೆ ಕಾರ್ಯಕ್ರಮದಲ್ಲಿ ಇಂದು 150 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡುತ್ತಿದ್ದಾರೆ. ಇವರೆಲ್ಲ ಮಧ್ಯಾಹ್ನದ ಬಿಸಿಯೂಟದ ಫಲಾನುಭವಿಗಳಾಗಿರುವ ಬಡ ವಿದ್ಯಾರ್ಥಿಗಳೆಂಬುದು ಗಮನಾರ್ಹ. ಇವರಲ್ಲಿ ಅನೇಕರು ನೂರಕ್ಕೆ ನೂರು ಅಂಕಗಳನ್ನು ಗಳಿಸಿದ್ದಾರೆ. ಈ ಸಂದರ್ಭದಲ್ಲಿ ಎಲ್ಲರಿಗೂ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯಬೇಕೆಂಬ ಸಂವಿಧಾನದ ಆಶಯ ನೆನಪಿಗೆ ಬರುತ್ತದೆ.

ಸಾಮಾಜಿಕ ಬೆಳವಣಿಗೆಯ ನಿಟ್ಟಿನಲ್ಲಿ ಮೀಸಲಾತಿ ನಿಯಮವನ್ನು ನಾವು ಪಾಲಿಸುತ್ತಿದ್ದೇವೆ. ಈ ನಿಯಮ ಎಷ್ಟರ ಮಟ್ಟಿಗೆ ಫಲಪ್ರದವಾಗಿದೆ ಎಂಬುದನ್ನು ಸಮಯವೇ ಹೇಳಬೇಕು. ಆದರೆ ವ್ಯಕ್ತಿಯ ಜಾತಿ ಯಾವುದೇ ಇರಲಿ, ಆರ್ಥಿಕ ಸ್ಥಿತಿಗತಿ ಏನೇ ಇರಲಿ ಅವು ಯಾವುವೂ ಅವನ ಪ್ರಗತಿಗೆ ಬಾಧಕವಲ್ಲ ಎಂಬುದು ಮಾತ್ರ ನಿಜ. ಹಸಿದ ಹೊಟ್ಟೆಯಲ್ಲಿ ಓದು ಕಷ್ಟ. ಹಿಂದೆ ಅನೇಕರು ಈ ಕಾರಣದಿಂದಾಗಿಯೇ ಓದಲು ಮುಂದೆ ಬರುತ್ತಿರಲಿಲ್ಲ. ಜೊತೆಗೆ ನಾಲ್ಕಾರು ಕಿಲೋಮೀಟರ್ ದೂರ ನಡೆದು ಶಾಲೆಗೆ ಹೋಗಬೇಕಾಗಿತ್ತು. ಆದರೆ ಇಂದು ಅಂತಹ ಪರಿಸ್ಥಿತಿಯಿಲ್ಲ.

ಇತರ ಎಲ್ಲ ದೇಶಗಳಿಗಿಂತ ಹೆಚ್ಚು ಯುವಕರು ನಮ್ಮ ದೇಶದಲ್ಲಿದ್ದಾರೆ. ಯುವಜನತೆಯೇ ನಮ್ಮ ದೇಶದ ಆಸ್ತಿ. ಈ ಯುವಕರಿಗೆ ಸರಿಯಾದ ವಿದ್ಯಾಭ್ಯಾಸ ಮತ್ತು ಸಂಸ್ಕಾರ ಕಲಿಸದಿದ್ದರೆ ಅವರೇ ದೇಶಕ್ಕೆ ಮಾರಕರಾಗುವ ಸಂಭವವಿದೆ. ಮಕ್ಕಳು ಶಾಲೆ ಬಿಡಲು ಮುಖ್ಯವಾದ ಕಾರಣ ಬಡತನ. ಬಡಮಕ್ಕಳನ್ನು ಶಾಲೆಗೆ ಸೇರಿಸಿ, ಹೊಟ್ಟೆತುಂಬ ಊಟ ನೀಡಿ, ಓದಿಗೆ ಅನುಕೂಲ ಮಾಡಿಕೊಟ್ಟರೆ ಅವರು ಎಂತಹ ಸಾಧನೆಯನ್ನು ಮಾಡುತ್ತಾರೆಂಬ ನಿದರ್ಶನ ನಮ್ಮ ಎದುರಿಗಿದೆ. ಸರಕಾರವೂ ಮಾಡಲು ಹಿಂಜರಿಯುವಂತಹ ಈ ಕೆಲಸವನ್ನು ತೇಜಸ್ವಿನಿ ಅನಂತಕುಮಾರರು ಮಾಡುತ್ತಿದ್ದಾರೆ.

ತೇಜಸ್ವಿನಿಯವರ ಕೆಲಸಗಳನ್ನು ಗಮನಿಸುವಾಗ ಸಮಾಜದ ಉನ್ನತ ಮಟ್ಟದಲ್ಲಿರುವ ನಮಗೇನೂ ಜವಾಬ್ದಾರಿ ಇಲ್ಲವೇ? ಎಂಬ ಪ್ರಶ್ನೆ ಎದುರಾಗುತ್ತದೆ. ವೈಯಕ್ತಿಕವಾಗಿ ನಮ್ಮಿಂದ ಏನೂ ಸಾಧ್ಯವಾಗದಿರಬಹುದು. ಆದರೆ ಅದಮ್ಯಚೇತನದಂತಹ ಒಂದು ಪ್ರತಿಷ್ಠಿತ ಸಂಸ್ಥೆ ನಿಸ್ವಾರ್ಥದಿಂದ ಇಂತಹ ಮಹತ್ಕಾರ್ಯವನ್ನು ಕೈಗೊಂಡಿರುವಾಗ ನಾವೂ ಅದರ ಜೊತೆ ಕೈಜೋಡಿಸಬಹುದು. ಪೆನ್ನು, ಪೆನ್ಸಿಲ್, ಪುಸ್ತಕ, ಸಮವಸ್ತ್ರ ಮುಂತಾದ ಸಣ್ಣಪುಟ್ಟ ಸಹಾಯದಿಂದ ಮಗುವಿನ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬಹುದು. ಇಂದು ಸಮಾಜದಲ್ಲಿ ಉನ್ನತ ಸ್ಥಾನ ಹೊಂದಿರುವ ಅನೇಕರು ಬಡತನದ ಹಿನ್ನೆಲೆಯಿಂದ ಬಂದವರೇ. ಅವರೆಲ್ಲ ತಮ್ಮ ಮಕ್ಕಳ ಓದಿನ ಜೊತೆಗೆ ಇಂತಹ ಮಕ್ಕಳ ವಿದ್ಯಾಭ್ಯಾಸವನ್ನೂ ನೋಡಿ ಸಂತೋಷಪಡಬಹುದು. ಇದೂ ಒಂದು ರೀತಿಯ ದೇಶಸೇವೆಯೇ! ಈ ರೀತಿಯಾಗಿ ಸಮಾಜದ ಋಣವನ್ನು ಪಡೆದು ಬೆಳೆದ ಮಕ್ಕಳು ಯೋಗ್ಯತೆಗೆ, ಹಿರಿಯರಿಗೆ ಗೌರವನೀಡುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳುತ್ತಾರೆ. ಇಂದು ಪುರಸ್ಕೃತರಾಗಿರುವ ಮಕ್ಕಳೆಲ್ಲರೂ ಸರಕಾರೀ ಶಾಲೆಯ ವಿದ್ಯಾರ್ಥಿಗಳು. ಇವರ ಸಾಧನೆಗೆ ಆಯಾ ಶಾಲೆಗಳ ಶಿಕ್ಷಕರ ಪರಿಶ್ರಮವೂ ಕಾರಣ. ಅವರನ್ನೂ ಗೌರವಿಸೋಣ.

ಅನಂತಕುಮಾರರು ಈ ದೇಶ ಕಂಡ ಅಪರೂಪದ ಶ್ರೇಷ್ಠ ರಾಜಕಾರಣಿ. ರಾಜಕಾರಣದ ಜೊತೆಗೆ ಸಮಾಜಸೇವೆಯಲ್ಲಿ ತೊಡಗಿಕೊಳ್ಳುವಂತೆ ಅದಮ್ಯ ಚೇತನದಂತಹ ಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ. ಬಿಸಿಯೂಟ ಕಾರ್ಯಕ್ರಮದ ಸಫಲತೆಯ ಗೌರವ ಅನಂತಕುಮಾರರಿಗೆ ಸಲ್ಲಬೇಕು. ಅನಂತಕುಮಾರರು ಇತರ ರಾಜಕಾರಣಿಗಳಿಗೂ, ಸಂಪನ್ಮೂಲ ಹೊಂದಿದವರಿಗೂ ಮಾದರಿಯಾಗಬೇಕು. ಇಂತಹ ಸತ್ಕಾರ್ಯಗಳಲ್ಲಿ ಸ್ವತಃ ತೊಡಗಿಕೊಳ್ಳಲು ಶಕ್ತರಾಗದಿರುವವರು ಪ್ರಾಮಾಣಿಕ ವ್ಯಕ್ತಿಗಳು ನಡೆಸುವ ಇಂತಹ ಸಂಸ್ಥೆಗಳ ಜೊತೆ ಕೈಜೋಡಿಸಬೇಕು.

ನಾನು ನ್ಯಾಯಾಧೀಶನಾಗಿದ್ದಾಗ ಅನಂತಕುಮಾರರು ಮಂತ್ರಿಯಾಗಿದ್ದರು. ಆದುದರಿಂದ ನಮ್ಮ ನಡುವೆ ಸಹಜದೂರವಿತ್ತು. ಆದರೆ, ನಿವೃತ್ತನಾದ ನಂತರ ಅವರನ್ನು ಹತ್ತಿರದಿಂದ ನೋಡಲು ಪ್ರಾರಂಭಿಸಿದೆ. ಅದಮ್ಯ ಚೇತನದ ಹತ್ತಿರವೇ ನಮ್ಮ ಮನೆಯಿದೆ. ಅಷ್ಟೇನೂ ವಿಶಾಲವಾಗಿಲ್ಲದ ಅನುಕೂಲತೆಗಳೂ ಇಲ್ಲದ ಸ್ಥಳದಲ್ಲಿ ಅದ್ಭುತವಾದ ಮಾದರಿ ಅಡುಗೆ ಮನೆಯನ್ನು ತೇಜಸ್ವಿನಿಯವರು ನಿರ್ವಹಿಸುತ್ತಿದ್ದಾರೆ. ಹೊಸ ಪ್ರಪಂಚವನ್ನು ಕಂಡ ವಿದ್ಯಾವಂತ ಮಹಿಳೆಯೊಬ್ಬರು ಇಂತಹ ಕೆಲಸದಲ್ಲಿಯೂ ಎಂತಹ ಸಾಧನೆ ಮಾಡಬಲ್ಲರು ಎಂಬುದಕ್ಕೆ ಅವರೇ ಉದಾಹರಣೆ. ಪ್ರತಿದಿನ ಸುಮಾರು ಎರಡು ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಶಿಸ್ತಿನಿಂದ ತಲುಪಿಸುವುದರ ಜೊತೆಗೆ ಫಲಾನುಭವಿಗಳ ಪ್ರತಿಭೆಯನ್ನೂ ಗುರುತಿಸಿ ಪುರಸ್ಕರಿಸುತ್ತಿರುವುದು ಅನುಕರಣೀಯ.

ಅಂಕಗಳನ್ನು ಗಳಿಸುವುದು ಮಾತ್ರ ಪ್ರತಿಭೆಯಲ್ಲ. ಉತ್ತಮ ಅಂಕಗಳನ್ನು ಗಳಿಸದ ಅನೇಕ ಪ್ರತಿಭೆಗಳಿವೆ. ಅವುಗಳನ್ನೂ ಗುರುತಿಸಿ ಪ್ರೋತ್ಸಾಹಿಸಿದರೆ ಅಂತಹ ವಿದ್ಯಾರ್ಥಿಗಳೂ ಸಮಾಜಕ್ಕೆ ಉಪಯುಕ್ತರಾಗಿ ಜೀವನ ನಡೆಸುತ್ತಾರೆ. ●

(ಪುಟ 3 ರಿಂದ)

## ಗವೀಪುರದಲ್ಲಿ ಸಮ್ಮೋಹನಾಸ್ತ್ರ

ಸುಮಾರು ೧೮೮೦ರ ದಶಕ. ಗೋಪಾಲರಾಯರ ಧಾರ್ಮಿಕ ಗೆಳೆಯರು ಮತ್ತು ಶಿಷ್ಯರು ಅವರ ಶಸ್ತ್ರ ಪ್ರಯೋಗದ ಶಕ್ತಿಯ ಮಾಂತ್ರಿಕ ಪ್ರದರ್ಶನವನ್ನು ತೋರಿಸಿ ಎಂದು ಸದಾ ಪೀಡಿಸುತ್ತಿದ್ದರು. ಅವರೆಲ್ಲ ಇದನ್ನು ರಾಮಾಯಣ ಹಾಗೂ ಮಹಾಭಾರತದಲ್ಲಿ ಮಾತ್ರ ಓದಿದ್ದರು. ಕಡೆಗೂ ರಾಯರು ಅವರ ಬೇಡಿಕೆಯನ್ನು ಮನ್ನಿಸಲೇಬೇಕಾಯಿತು. ಒಂದು ದಿನ ಸಂಜೆ ೫ ಘಂಟೆಗೆ ದನಗಾಹಿಗಳು ತಮ್ಮ ನೂರಾರು ದನಕರುಗಳನ್ನು ಹಿಂದಕ್ಕೆ ಕರೆದುಕೊಂಡು ಬರುವ ಸಮಯದಲ್ಲಿ ಅವರೆಲ್ಲರನ್ನೂ ಗವಿಪುರಂಗೆ ಕರೆದುಕೊಂಡು ಹೋದರು. ರಾಯರು ಈ ದನದ ಹಿಂಡಿನ ಮುಂಭಾಗದಲ್ಲಿ ನಿಂತು ಒಂದು ಅರ್ಕಪತ್ರವನ್ನು(ಎಕ್ಕದ ಎಲೆ) ತೆಗೆದುಕೊಂಡು ಒಂದು ಹುಲ್ಲುಕಡ್ಡಿಯಿಂದ ಏನನ್ನೋ ಬರೆದು, ಅದನ್ನು ಎರಡು ಭಾಗ ಮಾಡಿದರು. ಒಂದು ಭಾಗವನ್ನು ತಮ್ಮ ಬಲ ಪಾದದಡಿಯಲ್ಲಿಟ್ಟರು. ಎಲೆಯ ಇನ್ನೊಂದು ಭಾಗವನ್ನು ಎದುರಾಗಿ ಬರುತ್ತಿದ್ದ ದನದ ಹಿಂಡು ಮತ್ತು ದನಗಾಹಿಗಳ ಎದುರಿಗೆ ಕೈಯಲ್ಲಿ ಹಿಡಿದರು. ಇದ್ದಕ್ಕಿದ್ದಂತೆ ಆ ಸಮೂಹ ತಮಗೆ ಮೈಮೇಲೆ ಪ್ರಜ್ಞೆಯೇ ಇಲ್ಲದಂತೆ ತಟಸ್ಥವಾಗಿಬಿಟ್ಟಿತು. ಗೋಪಾಲರಾಯರ ಕೆಲವು ಗೆಳೆಯರು ಆ ವ್ಯಕ್ತಿಗಳ ಬಳಿ ಹೋಗಿ ಅವರನ್ನು ಅಲುಗಾಡಿಸಲು ಪ್ರಯತ್ನಿಸಿದರು. ಅವರ ಕಣ್ಣುಗಳು ಸಂಪೂರ್ಣವಾಗಿ ತೆರೆದಿದ್ದರೂ ಅವರೆಲ್ಲ ಪ್ರಜ್ಞೆಯಿಲ್ಲದವರಂತೆಯೇ ನಿಂತಿದ್ದರು. ಸುಮಾರು ಅರ್ಧ ಘಂಟೆಯವರೆಗೆ ಅವರು ಪ್ರತಿಮೆಗಳಂತೆ ನಿಂತಿದ್ದರು. ಇನ್ನು ಸಮ್ಮೋಹನಾಸ್ತ್ರವನ್ನು ದಯವಿಟ್ಟು ಉಪಸಂಹಾರ ಮಾಡುವಂತೆ ಗೆಳೆಯರು ಗೋಪಾಲರಾಯರನ್ನು ಕೇಳಿಕೊಂಡರು. ರಾಯರು ತಮ್ಮ ಕೈಯಲ್ಲಿದ್ದ ಅರ್ಕಪತ್ರದ ಭಾಗವನ್ನು ಬಿಸಾಡಿ, ತಮ್ಮ ಬಲಗಾಲನ್ನು ಸರಿಸಿದರು. ಆಗ ಆ ಗುಂಪು ಏನೂ ನಡೆದೇ ಇಲ್ಲವೇನೋ ಎಂಬಂತೆ ಮುಂದೆ ನಡೆಯಿತು. ಇದೇ ಮಹಾಭಾರತದಲ್ಲಿ ಉತ್ತರ ಗೋಗ್ರಹಣದ ಸಮಯದಲ್ಲಿ ಅರ್ಜುನ ಪ್ರಯೋಗಿಸಿದ ಸಮ್ಮೋಹನಾಸ್ತ್ರ. ಮಕ್ಕಳು ಎಡೆಬಿಡದ ಜ್ವರದಿಂದ ಕನವರಿಸುತ್ತಿದ್ದಾಗ, ಇಂಗ್ಲಿಷ್ ವೈದ್ಯರು ಕೈಚೆಲ್ಲಿದಾಗ ಗೋಪಾಲರಾಯರು ಇಂತಹ ಶಕ್ತಿಗಳನ್ನು ಪ್ರಯೋಗಿಸಿ ಮಕ್ಕಳ ರೋಗವನ್ನು ಗುಣಪಡಿಸುತ್ತಿದ್ದರಂತೆ. ಒಮ್ಮೆ, ಪರ್ಲಕಿಮಿಡಿಯ ತಹಸೀಲ್ದಾರ್, ಯುರೋಪಿಯನ್ ಕಲೆಕ್ಟರ್ ಜಮಾಬಂದಿಗೆ ಬಂದರು. ಗೋಪಾಲರಾಯರು ಎಲ್ಲವನ್ನೂ ಸಿದ್ಧಪಡಿಸಿಟ್ಟಿದ್ದರು. ಆದರೂ ಅವರು ಸಂಜೆ ಪಕ್ಷ ಪ್ರದೋಷ ವ್ರತವನ್ನು ಆಚರಿಸುವ ಸಲುವಾಗಿ ಕಚೇರಿಯಲ್ಲಿರಲಾಗದೆ ಮನೆಗೆ ಹಿಂತಿರುಗಬೇಕಾಯಿತು. ಅವರು ಕಚೇರಿಯಿಂದ ಮನೆಗೆ ಬಂದು ಪೂಜೆಯಲ್ಲಿ ತೊಡಗಿಕೊಂಡಿದ್ದರು. ಆಗ ಕಲೆಕ್ಟರನ ದಲಾಯತರೊಬ್ಬರು ಅವರನ್ನು ಕರೆಯಲು ಬಂದರು. ರಾಯರು ಈಗ ಬರಲಾಗುವುದಿಲ್ಲ, ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಹುಜೂರ್ ಶಿರಸ್ತೇದಾರರಿಗೆ ಕೊಡಲಾಗಿದೆ ಎಂದು ಹೇಳಿ ಕಳುಹಿಸಿದರು. ಇದನ್ನು ಕೇಳಿದ ಕಲೆಕ್ಟರ್ ಫ್ರೇಜರ್‌ಗೆ ಕೋಪ ಬಂದಿತು. ಅವರು ಗೋಪಾಲರಾಯರು ತತ್ ಕ್ಷಣ ಬರಲೇಬೇಕೆಂದೂ ಬರದಿದ್ದಲ್ಲಿ ಅವರನ್ನು ಕೆಲಸದಿಂದ ವಜಾ ಮಾಡಲಾಗುತ್ತದೆ ಎಂದೂ ಸಂದೇಶ ಕಳಿಸಿದರು. ಇಂತಹ ಬೆದರಿಕೆಗೆ ಬಗ್ಗದ ರಾಯರು ಏನೇ ಆದರೂ ತಮ್ಮ ಪೂಜೆಯನ್ನು ನಿಲ್ಲಿಸಲಾಗುವುದಿಲ್ಲ ಎಂದು ಹೇಳಿ ರಾಜೀನಾಮೆ ಪತ್ರವನ್ನು ತಾವಾಗಿಯೇ ಕಳಿಸಿದರು. ರಾಜೀನಾಮೆಯನ್ನು ಅಂಗೀಕರಿಸಿದ್ದೂ ಆಯಿತು.

ಆದರೆ, ವಿಶಾಲ ಹೃದಯಿಯಾದ ಕಲೆಕ್ಟರರಿಗೆ ರಾಯರ ನಿಜವಾದ ಭಕ್ತಿ ಧರ್ಮಶ್ರದ್ಧೆಗಳ ಅರಿವಾಯಿತು. ಆತ ಸಂಜೆ ಅವರಿಗೆ ಕರೆಕಳಿಸಿದರು. ತನ್ನ ತಪ್ಪನ್ನು ಒಪ್ಪಿಕೊಂಡು ಅಂದಿನಿಂದ ಅವರಿಗೆ ಹೆಚ್ಚಿನ ಗೌರವವನ್ನು ತೋರಿಸಲು ಆರಂಭಿಸಿದರು. ಮುಂದೆ ಅವರ ಪ್ರೋತ್ಸಾಹಕರೂ ಆದರು. ಗೋಪಾಲರಾಯರ ಮಗ ಸೂರ್ಯನಾರಾಯಣರಾವ್ ತಮ್ಮ ಆತ್ಮಕಥೆಯಲ್ಲಿ ಬರೆದಿರುವ ವೃತ್ತಾಂತವಿದು. ಬೆಂಗಳೂರು ಸೂರ್ಯನಾರಾಯಣರಾವ್ ತಮ್ಮ ಕಾಲದ ಪ್ರಸಿದ್ಧ ಜ್ಯೋತಿಷಿಯೂ ಇತಿಹಾಸಜ್ಞರೂ ಆಗಿದ್ದವರು. ●

# ಕಲಿಯುತ್ತಲೇ ಬೆಳೆಸುವ ಅನಂತಕುಮಾರ್

ನನ್ನ ಮತ್ತು ಅನಂತಕುಮಾರರ ಮೇಲೆ ವಿಶೇಷವಾದ ಜವಾಬ್ದಾರಿ ಇದ್ದ ಸಂದರ್ಭದಲ್ಲಿ ನಡೆದ ಕೆಲವು ಘಟನೆಗಳನ್ನು ಮಾತ್ರ ಅವರ 63ನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ ಉಲ್ಲೇಖಿಸಲು ಬಯಸುತ್ತೇನೆ. ಸ್ನೇಹ, ಸಂಬಂಧಗಳು ದೃಢವಾಗಿರಬೇಕಾದರೆ ಇತರರ ಸರಿ ತಪ್ಪುಗಳನ್ನು ಹುಡುಕುತ್ತ ಹೋಗಬಾರದು. ಒಳ್ಳೆಯತನದಿಂದ ಸೋತು ಬಾಳಿದರೆ ಜೀವನದಲ್ಲಿ ಸಂತೃಪ್ತಿ ಇರುತ್ತದೆ. ನಳಿನ್ ಕುಮಾರ್ ಮಂಗಳೂರಿನಲ್ಲಿ ನಮ್ಮ ಸಂಘಟನಾ ಕಾರ್ಯದರ್ಶಿಯಾಗಿದ್ದಾಗ ನಡೆದ ಒಂದು ಘಟನೆ. ಪಕ್ಷವು ನನ್ನನ್ನು ಮಂಗಳೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಆರಿಸಿತು. ಅನಂತಕುಮಾರರು ಪಕ್ಷದ ರಾಜ್ಯಾಧ್ಯಕ್ಷರಾಗಿದ್ದರು. ಅವರು ನನಗೆ ದೂರವಾಣಿ ಕರೆ ಮಾಡಿ "ಸದಾನಂದ ಗೌಡರೆ, ಚುನಾವಣೆಗಾಗಿ ನಾವು ನಿಮಗೆ ಒಂದಷ್ಟು ಹಣವನ್ನು ಕಳಿಸಿಕೊಡುತ್ತೇವೆ" ಎಂದು ಸ್ವಲ್ಪ ದೊಡ್ಡದೇ ಎಂಬಷ್ಟು ಮೊತ್ತವನ್ನು ದಕ್ಷಿಣಕನ್ನಡ ಜಿಲ್ಲೆಗೆ ಕಳಿಸಿಕೊಟ್ಟಿದ್ದರು.

ಅ ಸಮಯದಲ್ಲಿ ನಾವು ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ವಿಧಾನಸಭಾ ಚುನಾವಣೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೆವು. ಲೋಕಸಭಾ ಚುನಾವಣೆಯಲ್ಲಿ ವೀರಪ್ಪಮೊಯ್ಲಿಯವರು ನಮ್ಮ ಎದುರಾಳಿಯಾಗಿದ್ದರು. ನಮ್ಮ ಜಿಲ್ಲೆಯ ಗ್ರಾಮೀಣ ಭಾಗದ ಕಾರ್ಯಕರ್ತರೂ ಕೂಡ ನಮ್ಮಿಂದ ಯಾವುದೇ ಧನಸಹಾಯವನ್ನು ಅಪೇಕ್ಷಿಸುತ್ತಿರಲಿಲ್ಲ. ನಾವು ಆಯಾ ಗ್ರಾಮಗಳಿಗೆ ಭೇಟಿ ನೀಡಿದರೆ ಸಾಕಾಗಿತ್ತು. ನಮ್ಮದು ವೈಚಾರಿಕ ಹೋರಾಟವಾದುದರಿಂದ ಚುನಾವಣಾ ಪ್ರಚಾರದ ಊಟ, ವಾಹನ ಮುಂತಾದ ಎಲ್ಲ ವ್ಯವಸ್ಥೆಗಳನ್ನು ಕಾರ್ಯಕರ್ತರೇ ನೋಡಿಕೊಳ್ಳುತ್ತಿದ್ದರು. ಇಂದಿಗೂ ಇದೇ ವ್ಯವಸ್ಥೆ ಜಾರಿಯಲ್ಲಿದೆ. ಹೀಗಾಗಿ, ಚುನಾವಣೆಯ ಖರ್ಚಿಗೆಂದು ಪಕ್ಷವು ಕಳಿಸಿಕೊಟ್ಟ ಹಣದಲ್ಲಿ ಒಂದು ದೊಡ್ಡ ಮೊತ್ತವೇ ಉಳಿಯಿತು. ಅನಂತಕುಮಾರರಿಗೆ ಕರೆ ಮಾಡಿ, ಈ ಹಣವನ್ನು ಬೇರೆ ಯಾವುದಾದರೂ ಉದ್ದೇಶಕ್ಕೆ ಬಳಸಿಕೊಳ್ಳಬಹುದೆ ಎಂದು ಕೇಳಿದೆವು. ಅದಕ್ಕೆ ಅವರು "ಸದಾನಂದ ಗೌಡರೇ, ಹಣ ಎಲ್ಲಿಂದ ಬಂತೋ ಅಲ್ಲಿಗೇ ತಲುಪಿಸಿಬಿಡಿ, ಸರಿಯಾಗಿ ಲೆಕ್ಕಪತ್ರ ಇಡುವುದು ನಮ್ಮ ಜವಾಬ್ದಾರಿ" ಎಂದು ಹೇಳಿದ್ದರು. ಹೀಗಾಗಿ, ನಾನೇ ಕಾರನ್ನು ಓಡಿಸಿಕೊಂಡು ಬಂದು ಆ ಹಣವನ್ನು ಅವರಿಗೆ ತಲುಪಿಸಿದೆ. ನಾವು ಹಿಂತಿರುಗಿಸಿದ ಮೊತ್ತವನ್ನು ನೋಡಿ ಅನಂತಕುಮಾರರ ಕಣ್ಣುಗಳಲ್ಲಿ ನೀರು ತುಂಬಿತ್ತು. "ಸದಾನಂದ ಗೌಡರೇ, ದಕ್ಷಿಣ ಕನ್ನಡದ ಪಕ್ಷದ ಕಾರ್ಯಕರ್ತರಿಗೆ ನನ್ನ ಅಂತಃಕರಣಪೂರ್ವಕ ನಮಸ್ಕಾರಗಳನ್ನು ತಿಳಿಸಿ" ಎಂದು ಭಾವುಕರಾಗಿ ಹೇಳಿದ್ದರು. ರಾಜ್ಯದ ಎಲ್ಲ ಭಾಗದ ಕಾರ್ಯಕರ್ತರಲ್ಲೂ ಇಂತಹ ವಾತಾವರಣ ನಿರ್ಮಾಣವಾಗಲು ನಾವು ಏನಾದರೂ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಅವರು ಆಗ ಹೇಳಿದ್ದರು. ಕಾರ್ಯಕರ್ತರ ಪ್ರಾಮಾಣಿಕತೆಯನ್ನು ಮೆಚ್ಚಿ ಪ್ರಶಂಸೆ ಮಾಡಿದ ಅನಂತಕುಮಾರರು ನಾಯಕತ್ವಕ್ಕೆ ನಿಜವಾದ ಅರ್ಥವನ್ನು ಕೊಟ್ಟವರು.



## ಸದಾನಂದ ಗೌಡ

ಮಾಜಿ ಕೇಂದ್ರ ಸಚಿವರು

ಒಮ್ಮೆ ನಾನು ಪಕ್ಷದ ಅಧ್ಯಕ್ಷನಾಗಿದ್ದಾಗ ವಿಧಾನಪರಿಷತ್ತಿನ ಚುನಾವಣೆಗೆ ಮೂರು ಜನ ಅಭ್ಯರ್ಥಿಗಳನ್ನು ನಾವು ಆರಿಸಬೇಕಿತ್ತು. ಈ ಸಂಬಂಧ ನಮ್ಮ ಸಭೆ ನಡೆದಿತ್ತು. ಎಲ್ಲ ಪಕ್ಷಗಳಲ್ಲಿರುವಂತೆ ನಮ್ಮ ಪಕ್ಷದಲ್ಲಿಯೂ ಅಭ್ಯರ್ಥಿಗಳ ವಿಚಾರದಲ್ಲಿ ಅಲ್ಪಸ್ವಲ್ಪ ಭಿನ್ನಾಭಿಪ್ರಾಯಗಳಿದ್ದವು. ಎಷ್ಟೇ ಚರ್ಚಿಸಿದರೂ ಒಮ್ಮತ ಮೂಡಿರಲಿಲ್ಲ. ನಾನು ತುಂಬ ಕಿರಿಯನಾಗಿದ್ದುದರಿಂದ ನನ್ನ ಅಭಿಪ್ರಾಯ ಹೇಳಲು ಹಿಂಜರಿಯುತ್ತಿದ್ದೆ, ಅನಂತಕುಮಾರ್ ಮತ್ತು ಯಡಿಯೂರಪ್ಪನವರು ಬಾಯಿ ತೆರೆಯುತ್ತಿರಲಿಲ್ಲ. ಸಮಸ್ಯೆ ಬಗೆಹರಿಸುವುದು ಹೇಗೆ ಎಂದು ಚಿಂತೆಯಾಗಿತ್ತು. ಕೊನೆಗೆ ನಾನೇ ಮುಂದಾಗಿ ಬಂದಿರುವ ಎಲ್ಲ ಹೆಸರುಗಳ ಪಟ್ಟಿಯನ್ನು ಹಿಡಿದುಕೊಂಡು ಅನಂತಕುಮಾರ್ ಮತ್ತು ಯಡಿಯೂರಪ್ಪನವರೇ ಪ್ರತ್ಯೇಕವಾಗಿ ಕುಳಿತು ನಿರ್ಣಯ ತೆಗೆದುಕೊಳ್ಳಲಿ ಎಂಬ ಪ್ರಸ್ತಾಪ ಮಾಡಿದೆ. ಮೊದಲಿಗೆ ಅವರಿಬ್ಬರೂ ಒಪ್ಪಿಕೊಳ್ಳದಿದ್ದರೂ ನಂತರ ಒಲ್ಲದ ಮನಸ್ಸಿನಿಂದಲೇ ಒಪ್ಪಿಕೊಂಡರು. ಮುಖ ಗಂಟಿಕ್ಕಿಕೊಂಡೇ ಒಳಗೆ ಹೋಗಿದ್ದ ಅವರು ನಗುಮುಖದಿಂದ ಹೊರಗೆ ಬಂದಿದ್ದರು. ಅವರಿಬ್ಬರ ನಗುಮುಖವನ್ನು ನೋಡಿ ಮೂರು ತಿಂಗಳೇ ಕಳೆದಿದ್ದವು. ನಂತರ ಅವರು ಸೂಚಿಸಿದ ಹೆಸರುಗಳನ್ನು ಎಲ್ಲರೂ ಒಪ್ಪಿಕೊಂಡರು. ಆ ಸಂದರ್ಭದಲ್ಲಿ ನಾನು ನಡೆಕೊಂಡ ರೀತಿಯನ್ನು ಹೊಗಳಿದ ಅನಂತಕುಮಾರರು "ಇದರಿಂದ ನಾನು ಒಂದು ಪಾಠ ಕಲಿತೆ" ಎಂದಿದ್ದರು.

ನನ್ನ ರಾಜಕೀಯ ಜೀವನದಲ್ಲಿಯೇ ಭಾರೀ ಎನ್ನಬಹುದಾದ ಒಂದು ಘಟನೆ ಸಂಭವಿಸಿತು. ನಾನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವುದೇ ಕಷ್ಟ ಎಂಬಂಥ ಪರಿಸ್ಥಿತಿ ಎದುರಾಗಿತ್ತು. ಅಂದಿನ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಲಾಲ್ ಕೃಷ್ಣ ಅದ್ವಾನಿಯವರನ್ನು ಭೇಟಿಯಾಗಿ ಪರಿಸ್ಥಿತಿಯನ್ನು ವಿವರಿಸಿದೆ. ವೆಂಕಯ್ಯ ನಾಯ್ಡು, ಸುಷ್ಮಾ ಸ್ವರಾಜ್, ಅರುಣ್ ಜೈಟ್ಲೀ ಮುಂತಾದ ಹಿರಿಯ ನಾಯಕರೂ ಅಲ್ಲಿದ್ದರು. ಅದ್ವಾನಿಯವರು ತಮ್ಮ ಮನೆಯಲ್ಲಿಯೇ ಒಂದು ಮೀಟಿಂಗ್ ಕರೆದರು. ನಮ್ಮ ಕಿತ್ತಾಟವನ್ನು ಗಮನಿಸಿದ ಅದ್ವಾನಿಯವರು "How you are managing affairs of the party in Karnataka when these people are fighting like this?"ಎಂದು ಕೇಳಿದ್ದರು. ಅದಕ್ಕೆ ನಾನು ಸ್ವಲ್ಪ ತಮಾಷೆಯಾಗಿ, ನಾನು ಅನಂತಕುಮಾರ್ ಮತ್ತು ಯಡಿಯೂರಪ್ಪನವರ ನಡುವೆ ಓಡಾಡಲು ಒಂದಷ್ಟು ಗ್ಯಾಪ್ ಇರಿಸಿಕೊಂಡಿದ್ದೆ. ಬೆಳಿಗ್ಗೆ ಯಡಿಯೂರಪ್ಪನವರ ಮನೆಗೆ ಹೋದರೆ ಒಳ್ಳೆಯ ತಿಂಡಿ ಸಿಗುತ್ತಿತ್ತು ಸಂಜೆ ಅನಂತಕುಮಾರರ ಮನೆಗೆ ಹೋದರೆ ತಿನ್ನಲು ಕುರುಕಲು ತಿಂಡಿ ದೊರೆಯುತ್ತಿತ್ತು. ಆದರೆ ಇವರು ಹೇಳಿದ್ದನ್ನು ಅವರಿಗೆ, ಅವರು ಹೇಳಿದ್ದನ್ನು ಇವರಿಗೆ ಹೇಳುತ್ತಿರಲಿಲ್ಲ ಎಂದು ಉತ್ತರಿಸಿದೆ. ವಾತಾವರಣ ತಿಳಿಯಾಯಿತು. ಸಮಸ್ಯೆಯೂ ಬಗೆಹರಿಯಿತು. ನಂತರ ಭೇಟಿಯಾದ ಅನಂತಕುಮಾರರು ನನ್ನನ್ನು ಆಲಂಗಿಸಿಕೊಂಡು "ನಿನ್ನಿಂದ ನಾನು ಪಾಠ ಕಲಿತೆ. ಇನ್ನುಮುಂದೆ ನಾನೂ ಒಂದು ಗ್ಯಾಪ್ ಇಟ್ಟುಕೊಂಡೇ ವ್ಯವಹರಿಸುತ್ತೇನೆ" ಎಂದಿದ್ದರು.

ಅದು ಅನಂತಕುಮಾರರ ದೊಡ್ಡಗುಣ. ರಾಷ್ಟ್ರಮಟ್ಟದ ನಾಯಕರಾಗಿದ್ದೂ ಪಕ್ಷದ ಸಂಘಟನೆಯ ವಿಷಯದಲ್ಲಿ ಎಷ್ಟು ಸರಳವಾಗಿ ವರ್ತಿಸುತ್ತಿದ್ದರು ಎಂಬುದಕ್ಕೆ ಈ ಮೂರು ಉದಾಹರಣೆಗಳನ್ನು ನೀಡಿದ್ದೇನೆ. ಮುಂದೆ ಕೇಂದ್ರ ಸರಕಾರದ ಮಂತ್ರಿಯಾಗಿ ಅವರ ಜೊತೆ ಕೆಲಸ ಮಾಡುವಾಗಲೂ ಅವರಿಂದ ಸಲಹೆ ಸಹಕಾರಗಳನ್ನು ಪಡೆದುಕೊಳ್ಳುತ್ತಿದ್ದೆ. ಅವರು ನಿರ್ವಹಿಸಿದ ಖಾತೆ ನನ್ನ ಪಾಲಿಗೆ ಬಂದಾಗಲೂ ಅವರು ನನಗೆ ಮಾರ್ಗದರ್ಶನ ನೀಡಿದರು. ಸಾಮರಸ್ಯದಿಂದ ಸರಕಾರವನ್ನು ಯಶಸ್ವಿಯಾಗಿ ನಡೆಸಲು ಅನಂತಕುಮಾರರೇ ಉತ್ತಮ ಮಾದರಿ. ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆಯುವುದು ನಮ್ಮ ಕರ್ತವ್ಯ. ಅದರಿಂದ ಅವರ ಆತ್ಮಕ್ಕೂ ಶಾಂತಿ ದೊರೆಯುತ್ತದೆ ಎಂದು ನಾನು ಭಾವಿಸಿದ್ದೇನೆ. ●

## ಗೀತೆಯ ಸಂದೇಶ



ಶ್ರೀ ಕೃಷ್ಣ ಸಂಪಗಾಂವಕರ,
ಶಾಂತಿ ಕುಟೀರ, ಕಣ್ಣೂರು

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ
ಗೃಹ್ಣಾತಿ ನರೋಽಪರಾಣಿ |

ತಥಾ ಶರೀರಾಣಿ ವಿಹಾಯ ಜೀರ್ಣಾನಿ ಅನ್ಯಾನಿ
ಸಂಯಾತಿ ನವಾನಿ ದೇಹೀ || 2:22 ||


ಹೇಗೆ ಹರಿದ ಹಳೆಯ ಉಡುಪನ್ನು ತ್ಯಜಿಸಿ ಬೇರೆ ಹೊಸ ಉಡುಪನ್ನು ನಾವು ಧರಿಸುತ್ತೇವೆಯೋ ಅಂತೆಯೇ ಕುಗ್ಗಿ ಬಲಹೀನವಾದ ಶರೀರವನ್ನು ತ್ಯಜಿಸಿ, ನಾವು ಬೇರೆ ಹೊಸದಾದ ಶರೀರವನ್ನು ಧರಿಸುವೆವು.

ದುಃಖಕ್ಕೆ ಕಾರಣ ಮರಣವಲ್ಲ; ಮರಣದ ಅನವಶ್ಯಕ ಭಯವೇ ದುಃಖಕ್ಕೆ ಕಾರಣ. ಈ ಭಯವನ್ನು ಹೋಗಲಾಡಿಸಲು ಪರಮಾತ್ಮ ನಮಗೆ ಮರಣವೆಂದರೆ ಏನೆಂದು ತಿಳಿಸುತ್ತಾನೆ.

ಶರೀರ ಒಂದಲ್ಲ ಒಂದು ದಿನ ನಾಶವಾಗುತ್ತದೆ, ನಿಜ. ಆದರೆ ದೇಹಿ ಅಂದರೆ ದೇಹವಾಸಿಯಾದ ಆತ್ಮನಿಗೆ ಸಾವಿಲ್ಲ. ಈ ಶರೀರವೇ ನಾನೆಂದು ಬಗೆದು, ಶರೀರನಾಶವೆಂದರೆ ನನ್ನ ನಾಶ ಎಂದು ತಪ್ಪು ತಿಳಿದರೆ ಮರಣದ ಭಯ. ಆದರೆ, ಈ ದೇಹ ನಾನಲ್ಲ, ದೇಹವಾಸಿ ಆತ್ಮನೇ ನಾನು ಎಂದು ಭಾವಿಸಿದರೆ ಸಾವಿನ ಭಯವಿಲ್ಲ.

ಆತ್ಮವೇ ಆದ ನಾನು ಈ ದೇಹವನ್ನು ಬಳಸುತ್ತೇನೆ. ಈ ದೇಹ ಸವೆದು ಸವೆದು ನಶಿಸಿ ಹೋದರೆ, ಈ ಕೆಲಸಕ್ಕೆ ಬಾರದ ದೇಹವನ್ನು ಬಿಸುಟು ಹೊಸ ದೇಹವನ್ನು ತೆಗೆದುಕೊಳ್ಳುತ್ತೇನೆ. ಬಟ್ಟೆ ಬದಲಿಸಿದಂತೆ ದೇಹ ಬದಲಿಸುವುದಕ್ಕೆ ಸಾವು ಎನ್ನುತ್ತಾರೆ. ಸಾವು ನಾನು ಬಿಸಾಡುವ ದೇಹಕ್ಕೆ ಆತ್ಮನಾದ ನನಗಲ್ಲ. ನಾನು ಅವಿನಾಶಿ ಆತ್ಮನಿದ್ದೇನೆ ಎಂದು ತಿಳಿದರೆ ಮರಣದ ಭಯ ತಪ್ಪುತ್ತದೆ.

# ಸೋತಾಗಲೂ ಜೊತೆಯಿದ್ದವರು



**ಹನುಮಂತರಾಯಪ್ಪ**
ಮಾಜಿ ಅಧ್ಯಕ್ಷರು, ಕೇಂದ್ರ ರೇಷ್ಮೆ ಮಂಡಳಿ

ರಾಜಕಾರಣದಲ್ಲಿ ಜ್ಞಾಪಕ ಶಕ್ತಿ ಅಗಾಧವಾದ ಪರಿಣಾಮವನ್ನು ಬೀರುತ್ತದೆ. ಜ್ಞಾಪಕ ಶಕ್ತಿಯಿಂದಾಗಿ ಶೇ. 20 ರಿಂದ 30ರಷ್ಟು ಕೆಲಸ ಹಗುರವಾಗುತ್ತದೆ. ನಾನು ಬಾಲ್ಯದಲ್ಲಿ ಜನಸಂಘದಲ್ಲಿ ಕೆಲಸ ಮಾಡಿದವನು. ಅನಂತಕುಮಾರರಂಥ ಇನ್ನೊಬ್ಬರನ್ನು ಆ ದಿನಗಳಲ್ಲಿ ನೋಡಿದ್ದೆ. ಅವರು ಲೋಕಸಭೆಯ ಉಪಸಭಾಪತಿಯಾಗಿದ್ದ ಮಲ್ಲಿಕಾರ್ಜುನಯ್ಯನವರು. ಅವರು ಒಮ್ಮೆ ದೊಡ್ಡಬಳ್ಳಾಪುರಕ್ಕೆ ಭೇಟಿ ನೀಡಿದ್ದರು. ಆಗ ವಿಶ್ವನಾಥರ ಮಗಳು ಮಿಡಲ್ ಸ್ಕೂಲಿನಲ್ಲಿ ಓದುತ್ತಿದ್ದಳಲ್ಲ, ಈಗ ಏನು ಮಾಡುತ್ತಿದ್ದಾಳೆ ಎಂದು ಕೇಳಿದ್ದರು. ಯಾವ ವಿಶ್ವನಾಥ್, ಯಾವ ಮಗಳು, ನಮಗೆ ಒಂದೂ ತಿಳಿಯದಾಗಿತ್ತು. ಮಲ್ಲಿಕಾರ್ಜುನಯ್ಯನವರು ಒಮ್ಮೆ ಗುರುತಾದ ಜನರನ್ನು ಸಂದರ್ಭ ಬಂದಾಗಲೆಲ್ಲ ವಿಚಾರಿಸಿಕೊಳ್ಳುತ್ತಿದ್ದರು. ಅದೇ ರೀತಿಯ ಅಗಾಧ ಸ್ಮರಣ ಶಕ್ತಿ ಹೊಂದಿದವರು ನಮ್ಮ ಅನಂತಕುಮಾರರು.

ದೊಡ್ಡಬಳ್ಳಾಪುರ ಸಮಸ್ಯೆಗಳನ್ನು ತೆಗೆದುಕೊಂಡು ನೂರಿನ್ನೂರು ಜನರನ್ನು ಕರೆದುಕೊಂಡು ನಾನು ಅನಂತಕುಮಾರರ ಬಳಿ ಅನೇಕ ಬಾರಿ ಹೋಗುತ್ತಿದ್ದೆ. ಪ್ರತಿ ಬಾರಿ ಹೋದಾಗಲೂ ಒಂದು ಊಟದ ವ್ಯವಸ್ಥೆಯನ್ನು ಅವರ ಮನೆಯಲ್ಲಿಯೇ ಮಾಡಿಸುತ್ತಿದ್ದರು. ಊಟಕ್ಕೋ ಉಪಾಹಾರಕ್ಕೋ ಅವರು ಹೇಳಿದ ಸಮಯಕ್ಕೆ ಹೋಗಿ ಕುಳಿತರೆ ಅವರು ಬರುವುದು ಯಾವಾಗಲೋ! ಅನೇಕ ಬಾರಿ ತಡರಾತ್ರಿಯೂ ಆಗುತ್ತಿತ್ತು. ಆದರೆ ಬಂದ ನಂತರ ಪ್ರತಿಯೊಬ್ಬರನ್ನೂ ವೈಯಕ್ತಿಕವಾಗಿ ವಿಚಾರಿಸಿಕೊಳ್ಳುತ್ತಿದ್ದರು. ನೇಕಾರರ ವಿಷಯ ಬಂದಾಗ ನಾನು ಎಲ್ಲ ಪಕ್ಷದವರನ್ನೂ ಕರೆದೊಯ್ಯುತ್ತಿದ್ದೆ. ಅಂತಹ ಸಂದರ್ಭಗಳಲ್ಲಿ ಎಲ್ಲರೆದುರಿಗೇ ನನ್ನನ್ನು ಹೊಗಳುತ್ತಿದ್ದರು. ಇದರಿಂದಾಗಿ ಇತರ ಪಕ್ಷದವರ ಕಣ್ಣಿನಲ್ಲಿ ನನ್ನ ಅಂತಸ್ತು ಹೆಚ್ಚುತ್ತಿತ್ತು. ಅನಂತಕುಮಾರರಂತಹ ಹಿರಿಯ ನಾಯಕರು ಪಕ್ಷದ ಸಾಮಾನ್ಯ ಕಾರ್ಯಕರ್ತರನ್ನು ಗೌರವದಿಂದ ನಡೆಸಿಕೊಳ್ಳುವ ರೀತಿ ಇತರ ಪಕ್ಷದ ಜನರಿಗೆ ಅಚ್ಚರಿಯಾಗಿತ್ತು.

ನನಗೆ ಯಾವುದಾದರೂ ಒಂದು ಸ್ಥಾನ ದೊರಕಿಸಿಕೊಡಬೇಕೆಂದು ಒಮ್ಮೆ ಅವರು ನನ್ನನ್ನು ವೆಂಕಯ್ಯ ನಾಯ್ಡುರವರ ಮನೆಗೆ ಕರೆದುಕೊಂಡು ಹೋಗಿದ್ದರು. ಅನಂತಕುಮಾರರ ಆಗ್ರಹವನ್ನು ಗಮನಿಸಿ ನಾಯ್ಡುರವರು "ಏನು ಮಾಡಲಪ್ಪ, ಹನುಮಂತರಾಯಪ್ಪನಿಗೆ ಇಂಗ್ಲಿಷ್ ಬರೋದಿಲ್ವಲ್ಲಪ್ಪ" ಎಂದಿದ್ದರು. ಅದಕ್ಕೆ ಅನಂತಕುಮಾರರು, "ನೀವು ಅದಕ್ಕೆಲ್ಲ ಯೋಚಿಸಬೇಡಿ, ಈತನಿಗೆ ಕೇಂದ್ರ ಮಂತ್ರಿಮಂಡಲದಲ್ಲಿ ಸ್ಥಾನ ಕೊಡಿಸಿದರೂ ನಿರ್ವಹಿಸುವಷ್ಟು ಶಕ್ತಿಯಿದೆ" ಎಂದಿದ್ದರು. ಅದರಿಂದಾಗ, ನನಗೆ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷನಾಗಿ ಕೆಲಸ ಮಾಡುವ ಅವಕಾಶ ದೊರೆಯಿತು. ನಾನು ಏಳು ಬಾರಿ ನಗರಸಭಾ ಸದಸ್ಯನಾಗಿ ಚುನಾಯಿತನಾಗಿದ್ದೆ, ಎರಡು ಬಾರಿ ನಗರಸಭೆಯ ಅಧ್ಯಕ್ಷನೂ ಆಗಿದ್ದೆ. ನಾಲ್ಕು ಅವಧಿಗೆ ಪಕ್ಷದ ಜಿಲ್ಲಾಧ್ಯಕ್ಷನೂ ಆಗಿ ಕೆಲಸ ಮಾಡಿದ್ದೆ. ನನ್ನ ಈ ಅನುಭವವನ್ನು ಅನಂತಕುಮಾರರು ಚೆನ್ನಾಗಿ ಗ್ರಹಿಸಿ ಪ್ರೋತ್ಸಾಹಿಸಿದ್ದರು. ಒಮ್ಮೆ ಅವರು ವಾಜಪೇಯಿಯವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. ಆಗ ನನ್ನನ್ನು ಪರಿಚಯ ಮಾಡಿಕೊಡುತ್ತ, "ಇವರು ತುಂಬ ಹಳೆಯ ತಲೆ, ಬಹಳ ಸಣ್ಣ ಹುಡುಗನಾಗಿದ್ದಾಗಿನಿಂದ ಇವರು ನಮ್ಮ ಪಕ್ಷದ ಕಾರ್ಯಕರ್ತರಾಗಿದ್ದವರು" ಎಂದು ಹೇಳಿದಾಗ ವಾಜಪೇಯಿಯವರು ತುಂಬ ಸಂತಸ ವ್ಯಕ್ತಪಡಿಸಿದ್ದರು. ನಮ್ಮ ಪಕ್ಷ ಅಧಿಕಾರಕ್ಕೆ ಬರುವ ಮೊದಲೇ ಅದ್ವಾನಿ ಮತ್ತು ವಾಜಪೇಯಿಯವರು ಬಹಳಷ್ಟು ಬಾರಿ ದೊಡ್ಡಬಳ್ಳಾಪುರಕ್ಕೆ ಬಂದು ಹೋಗಿದ್ದರು.

ನಾನು ಮೂರು ಬಾರಿ ಚುನಾವಣೆಗೆ ನಿಂತಿದ್ದೆ. ಪ್ರತಿಬಾರಿಯೂ ನನ್ನ ಎದುರಾಳಿ, ಆರ್ ಎಲ್ ಜಾಲಪ್ಪ. ಹೀಗಾಗಿ ಪ್ರತಿಬಾರಿಯೂ ಸೋಲಬೇಕಾಯಿತು. ಕೊನೆಯ ಚುನಾವಣೆಯಲ್ಲಿ ನನ್ನ ಮೂವತ್ತು ಎಕರೆ ತೋಟ ಮಾರಬೇಕಾಯಿತು. ಆದರೆ, ನಾನು ಸೋತಾಗಲೂ ಅನಂತಕುಮಾರ್ ನನ್ನ ಕೈಬಿಡಲಿಲ್ಲ. ನೂರಾರು ಬಾರಿ ನಾನು ಸಂಗಡಿಗರೊಡನೆ ದೆಹಲಿಗೆ ಹೋದಾಗ ನಮಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಪ್ರೀತಿಯಿಂದ ಮಾಡಿಕೊಟ್ಟಿದ್ದರು.

ಅನಂತಕುಮಾರರಿಗೆ ಮುಖ್ಯಮಂತ್ರಿಯಾಗಲು, ಪ್ರಧಾನ ಮಂತ್ರಿಯಾಗಲು ಬೇಕಾದ ಎಲ್ಲ ಅರ್ಹತೆಗಳೂ ಇದ್ದವು. ಕಾರ್ಯಕರ್ತರಿಗೆ ಅವರು ಸ್ಫೂರ್ತಿ ಚಿಲುಮೆಯಾಗಿದ್ದರು. ಇಂದು ಪಕ್ಷ ಬೆಳೆದಿದೆ. ದೊಡ್ಡ ದೊಡ್ಡ ನಾಯಕರು ಪಕ್ಷದಲ್ಲಿದ್ದಾರೆ. ಆದರೆ ಕಾರ್ಯಕರ್ತರನ್ನು ಪ್ರೀತಿಯಿಂದ ಮಾತನಾಡಿಸುವವರಿಲ್ಲ. ಕೂಲಿ ನಾಲಿ ಮಾಡಿ ಪಕ್ಷ ಕಟ್ಟಿದ ನಮ್ಮನ್ನು ಕೆಲವು ಕಡೆ ಒಳಗೆ ಬಿಡುವುದೂ ಇಲ್ಲ. ಅನಂತಕುಮಾರರು ಬದುಕಿದ್ದರೆ ನಮ್ಮ ನೋವುಗಳನ್ನು ಅವರ ಬಳಿ ತೋಡಿಕೊಳ್ಳಬಹುದಿತ್ತು. ಅಷ್ಟರ ಮಟ್ಟಿಗೆ ನಾವು ಬಡವರಾಗಿದ್ದೇವೆ. ●

## ಅಭಿಪ್ರಾಯ

### ಧನ್ಯವಾದ

ಕಾಲೇಜ್ ಸೇರಿದ ಮೊದಲಿಗೆ ನಮಗೆ ಮಧ್ಯಾಹ್ನದ ಊಟಕ್ಕೆ ತುಂಬಾ ತೊಂದರೆ ಆಗಿತ್ತು. ತದನಂತರ ಅದಮ್ಯ ಚೇತನ ನಮಗೆ ಪೌಷ್ಟಿಕಾಂಶಯುಕ್ತ ರುಚಿಯಾದ ಆಹಾರವನ್ನು ನೀಡಲು ಆರಂಭಿಸಿತು. ಇದರಿಂದ ನಮಗೆ ತುಂಬಾ ಅನುಕೂಲವಾಗಿದೆ. ತೇಜಸ್ವಿನಿ ಮೇಡಂಗೆ ಧನ್ಯವಾದ ತಿಳಿಸುತ್ತಾ, ನಾವು ಅದಮ್ಯ ಚೇತನಕ್ಕೆ ಮತ್ತು ಅಲ್ಲಿನ ಸಿಬ್ಬಂದಿಗಳಿಗೆ ಎಂದಿಗೂ ಚಿರಋಣಿಯಾಗಿರುತ್ತೇವೆ.

**-ಅಲ್ಲಾಭಕ್ಷ, ವಿಜಯಾ ಕಾಲೇಜಿನ ವಿದ್ಯಾರ್ಥಿ**

### ಅನಂತಪಥ

ಅನಂತಕುಮಾರರು ಉತ್ತಮ ವ್ಯಕ್ತಿ ಮಾತ್ರವಲ್ಲದೆ, ಅವರೇ ಒಂದು ಸಂಸ್ಥೆ ಎಂದರೆ ತಪ್ಪಾಗಲಾರದು. ಈ ಮಾತಿಗೆ ಪೂರಕವೆಂಬಂತೆ, ಈ ಪತ್ರಿಕೆ ಅನಂತಕುಮಾರರ ಪ್ರತಿನಿಧಿಯಾಗಿ ಪ್ರಕಟವಾಗುತ್ತಿದೆ. ಅನಂತಕುಮಾರರ ಧ್ಯೇಯ, ವಿಚಾರಧಾರೆ, ದೂರದೃಷ್ಟಿ, ಪ್ರತೀ ಸಂಚಿಕೆಯಲ್ಲಿ ಬೇರೆ ಬೇರೆ ಶೀರ್ಷಿಕೆಯಡಿ ಮೂಡಿ ಬರುತ್ತಿದೆ. ಈ ನಿಯತಕಾಲಿಕೆಯಲ್ಲಿ ಪ್ರಕಟವಾಗುತ್ತಿರುವ ವಿಚಾರಧಾರೆಗಳು ಓದುಗರನ್ನು ಉನ್ನತದ ಕಡೆಗೆ ಪ್ರಚೋದಿಸುತ್ತಿವೆ. ಈ ಪತ್ರಿಕೆಯ ಯಶಸ್ಸಿಗೆ ಶ್ರಮಿಸುತ್ತಿರುವ ಶ್ರೀಮತಿ ತೇಜಸ್ವಿನಿ ಅನಂತಕುಮಾರರಿಗೆ, ಗೋಪಾಲ್ ಟಿ.ಎಸ್. ಮತ್ತು ತಂಡದವರಿಗೆ ಅಭಿನಂದನೆಗಳು. ಈ ಪತ್ರಿಕೆ ನಿರಂತರವಾಗಿ ಪ್ರಕಟವಾಗುತ್ತಿರಲಿ ಎಂದು ಆಶಿಸುತ್ತೇನೆ.

**- ಕುಮಾರಸ್ವಾಮಿ ಎಸ್.**

ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Srikanth K / Veena Vittal**
Photographs: **Venkatesh Murthy / Gopal TS / Chakrapani Kengeri / Internet Sources**
Acknowledgements: **Raghavendra Prasad / Krishna Sampagaonkar / Chaya Bapat**
Sketch: **Rashmi Killedar** Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415



ಸಸ್ಯಲೋಕ ಪರಿಚಯ ಮಾಲಿಕೆ- 15

# ನೆಲ ಸೇವಂತಿಗೆ



ಛಾಯಾ ಓಕ್ ಬಾಪಟ್

ನಮ್ಮ ಕಣ್ಣ ಮುಂದೆಯೇ ಯಾವಾಗಲೂ ಕಂಡುಬರುವ, ಕೈತೋಟಗಳಲ್ಲಿ ಹುಲ್ಲಿನಂತೆ ಸುಲಭವಾಗಿ ಬೆಳೆಯುವ ಈ ಸಸ್ಯವನ್ನು ಎಲ್ಲರೂ ನಿರ್ಲಕ್ಷಿಸುತ್ತಾರೆ. ಆದರೆ ಇದು ಔಷಧೀಯವಾಗಿ ಅತ್ಯಮೂಲ್ಯವಾದ ಸಸ್ಯ. ನಾವೆಲ್ಲ ಮಕ್ಕಳಾಗಿದ್ದಾಗ "ರಾವಣನ ತಲೆ ಗಿಡ" ಅಂತೆಲ್ಲ ಆಟವಾಡುತ್ತಿದ್ದೆವು. ಈ ಸಸ್ಯವು ಪಾಳುಬಿದ್ದ ಜಮೀನು, ರಸ್ತೆಗಳ ಪಕ್ಕ, ಹೊಲ ತೋಟಗಳಲ್ಲಿ ಕಳೆಯಂತೆ 1-2 ಅಡಿ ಹರಡಿಕೊಂಡು ಬೆಳೆಯುತ್ತದೆ. ಇದರಲ್ಲಿ ತಿಳಿ ಹಳದಿ ಹಾಗೂ ಬಿಳಿ ಹೂವು ಬಿಡುವ ಎರಡು ಪ್ರಭೇದಗಳಿದ್ದು, ಎರಡರಲ್ಲೂ ಒಂದೇ ರೀತಿಯ ಔಷಧೀಯ ಗುಣಗಳಿವೆ. ನೆಲದಿಂದ ಸ್ವಲ್ಪ ಎತ್ತರದಲ್ಲಿ ಇರುವ ಈ ಗಿಡ ಸೇವಂತಿಗೆ ಹೂವಿನ ಬೋನ್ಸಾಯ್ ಗಿಡದಂತೆ ಕಾಣುತ್ತದೆ.

ಗಬ್ಬು ಸೇವಂತಿಗೆ, ಸಣ್ಣ ಸೇವಂತಿ, ಅಡ್ಡಿಗೆಸೊಪ್ಪು, ಅಡ್ಡಿಕೆಸೊಪ್ಪು, ಬೆಲ್ಲದಸೊಪ್ಪು, ವಿಶಾಲಕರ್ಣಿ (ಜಯಂತಿವೇದ), ಮೆಕ್ಸಿಕನ್ ವೈಲ್ಡ್ ಡೈಸಿ, ರೋಸ್ ಡೈಸಿ, ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ ಈ ಹೂವುಗಳನ್ನು ಹಾರಾಡುವ ಹೂ ಎಂದೂ ಕರೆಯುತ್ತಾರೆ. ಈ ಹೂವುಗಳನ್ನು ಬಣ್ಣಬಣ್ಣದ ಚಿಟ್ಟೆಗಳು ಮಕರಂದಕ್ಕಾಗಿ ಮುತ್ತುತ್ತಿರುವುದನ್ನು ಕಾಣಬಹುದು.

**ಸಸ್ಯ ವಿವರ**- ಗಬ್ಬು ಸೇವಂತಿಗೆ ಗಿಡವು ಸುಮಾರು 30 ರಿಂದ 60 ಸೆ.ಮೀ ಎತ್ತರಕ್ಕೆ ಬೆಳೆದರೆ ಹೂವು 1 ರಿಂದ 1.5 ಸೆ.ಮೀ ಸುತ್ತಳತೆ ಹೊಂದಿರುತ್ತದೆ. ಉದ್ದನೆಯ ಬಳುಕುವ ಮೃದುವಾದ ಸಣ್ಣ ಕಡ್ಡಿಯ ಕಾಂಡದ ತುದಿಯಲ್ಲಿ ಪುಟ್ಟ ಹಳದಿ ಎಸಳುಗಳಿರುವ ಈ ಹೂಗಳನ್ನು ಮಕರಂದ ಹೀರಲು ಚಿಟ್ಟೆಗಳು ಮುತ್ತುತ್ತವೆ. ತಾವರೆ ಹೂವಿನ ಪುಟ್ಟಮೊಗ್ಗಿನಂತಿರುವ ಇದರ ಮೊಗ್ಗುಗಳು ಹಾಗೂ ಅರಳಿದ ಸೇವಂತಿಗೆ ಹೂವಿನಂತಿರುವ ಹೂಗಳು ಬಹಳ ಸುಂದರವಾಗಿವೆ. ಇದರ ಬೀಜಗಳು ಗಾಳಿಗೆ ಹಾರುತ್ತವೆ. ಬಹುಬೇಗ ನೆಲದ ಮೇಲೆ ಹಬ್ಬುವ ಈ ಸಸ್ಯ ಇಡೀ ಭಾರತದಲ್ಲಿ ಕಂಡು ಬರುತ್ತದೆ. ಅನೇಕ ಔಷಧೀಯ ಗುಣಗಳುಳ್ಳ ಸುಂದರ ಸಸ್ಯವನ್ನು ಕಳೆಯೆಂದು ಕಿತ್ತು ಬಿಸಾಕದೇ ಮನೆಯಲ್ಲಿ ಬೆಳೆಯಲು ಬಿಡಬೇಕು.

**ಔಷಧೀಯ ಉಪಯೋಗಗಳು**- ಪುರಾತನ ಕಾಲದಿಂದಲೂ ನೆಲ ಸೇವಂತಿಗೆ ಅಥವಾ ಅಡ್ಡಿಗೆಸೊಪ್ಪನ್ನು ಭಾರತೀಯ ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಬಳಸುತ್ತಾ ಬಂದಿದ್ದಾರೆ. ಕ್ರಿಮಿನಾಶಕ ಗುಣಗಳುಳ್ಳ ಈ ಸಸ್ಯವು ಬಹಳ ಉಪಯುಕ್ತವಾಗಿದೆ. ಇದರಲ್ಲಿರುವ ಔಷಧೀಯ ಗುಣಗಳನ್ನು ಗ್ರಾಮಾಂತರ ಪ್ರದೇಶದ ಜನರು ಚೆನ್ನಾಗಿ ಬಲ್ಲರು. ಕೆಲವು ಕಡೆ ಇದರಿಂದ ಪಲ್ಯಮಾಡಿ ಸೇವಿಸುತ್ತಾರೆ.

ಈ ಗಿಡಕ್ಕೆ ರೋಗನಿರೋಧಕ ಗುಣ ಇದೆ. 1) ಗಾಯವಾಗಿ ರಕ್ತಸ್ರಾವ ಆದಾಗ ಗಬ್ಬು ಸೇವಂತಿಗೆ ಎಲೆಯ ಹೂವಿನ ಲೇಪ ಹಚ್ಚಿದರೆ ಅದು ರಕ್ತ ಸ್ರಾವವನ್ನು ತಡೆದು ರಕ್ತದ ಹೆಪ್ಪುಗಟ್ಟುವಿಕೆಗೆ ಸಹಾಯ ಮಾಡುತ್ತದೆ. 2) ಈ ಸಸ್ಯದ ಎಲೆಗಳಿಂದ ಹೂಗಳಿಂದ ಎಣ್ಣೆಯನ್ನು ತಯಾರಿಸಿ ಉಪಯೋಗಿಸಿದರೆ ಕೂದಲು ಉದುರುವಿಕೆ, ಬಾಲನರೆ, ನರೆ ಕೂದಲು, ತಲೆ ಹೊಟ್ಟು ನಿವಾರಣೆಯಾಗಿ, ಕೂದಲು ಸೊಂಪಾಗಿ, ಉದ್ದವಾಗಿ ಬೆಳೆಯುತ್ತದೆ 3) ಚರ್ಮ ಸಂಬಂಧಿ ಕಾಯಿಲೆಗಳಿಗೆ ಹೆಚ್ಚು ಉಪಯುಕ್ತ. 4) ದೇಹದ ಯಾವುದೇ ಭಾಗದಲ್ಲಿ ಊತ ಕಂಡು ಬಂದರೆ ಗಿಡದ ಎಲೆಗಳನ್ನು ಅರೆದು ಪಟ್ಟಿ ಕಟ್ಟಿದರೆ ಗುಣಮುಖವಾಗುತ್ತದೆ. 5) ಈ ಗಿಡದ ಎಲೆಗಳ ಕಷಾಯ ಮಾಡಿ ಸೇವಿಸಿದರೆ ಅಸ್ತಮಾ, ಕೆಮ್ಮು, ವಾಂತಿ ಭೇದಿ ಗ್ಯಾಸ್ಟ್ರಿಕ್ ಸಮಸ್ಯೆಗಳು, ಹೊಟ್ಟೆಯಲ್ಲಿ ಉರಿ, ಹುಣ್ಣು, ಅಜೀರ್ಣ ಮುಂತಾದ ಸಮಸ್ಯೆಗಳು ನಿವಾರಣೆಯಾಗುತ್ತವೆ. 6) ಬಾಯಿ ಹುಣ್ಣಾದಾಗ ಎಲೆಯ ರಸ ಜೇನುತುಪ್ಪದಲ್ಲಿ ಕಲೆಸಿ ಬಾಯಿಗೆ ಲೇಪಿಸುತ್ತಿದ್ದರೆ ಬೇಗ ಶಮನವಾಗುತ್ತದೆ. 7) ಈ ಗಿಡದ ಹೂವುಗಳು ಒಂದು ರೀತಿಯ ವಿಚಿತ್ರ ವಾಸನೆ ಹೊಂದಿರುವುದರಿಂದ ತೋಟದಲ್ಲಿ ಇವುಗಳನ್ನು ಬೆಳೆಸಿದರೆ ಜೊತೆಗಿರುವ ಸಸ್ಯಗಳಿಗೆ ಕ್ರಿಮಿ ಕೀಟಕಗಳ ಬಾಧೆ ಇರುವುದಿಲ್ಲ. 8) ಹೂವಿನ ರಸವನ್ನು ಮೈಗೆ ಹಚ್ಚಿಕೊಳ್ಳುವುದರಿಂದ ಸೊಳ್ಳೆಗಳ ಕಡಿತದಿಂದ ತಪ್ಪಿಸಿಕೊಳ್ಳಬಹುದು.

ಹಿಂದೆ ಶಾಲೆಗಳಲ್ಲಿ ಕಪ್ಪು ಹಲಗೆಗೆ ಹೊಳಪನ್ನು ಬರಿಸಲು ಮತ್ತು ಅಕ್ಷರ ಚೆನ್ನಾಗಿ ಕಾಣಲು ಅಡ್ಡಿಗೆ ಸೊಪ್ಪನ್ನು ಇದ್ದಿಲು ಪುಡಿ ಜತೆ ಕುಟ್ಟಿ ಬಳಿಯುತ್ತಿದ್ದರು. ದನಕರುಗಳಿಗೆ ಒಳ್ಳೆಯ ಮೇವು ಆಗಿರುವ ಈ ಗಿಡದ ಹೂವಿನಿಂದ ಗ್ರಾಮೀಣ ಹೆಣ್ಣು ಮಕ್ಕಳು ತೋಳಬಂದಿ, ಕಡಗ, ಅಡ್ಡಿಗೆ, ಕಿವಿಗೆ ಓಲೆ ಮುಂತಾದ ಆಭರಣಗಳನ್ನು ತಯಾರಿಸಿ ಆಟವಾಡುವರು.

**ಎಚ್ಚರಿಕೆ: ಗರ್ಭಿಣಿಯರು ಈ ಗಿಡದ ಕಷಾಯ ಸೇವಿಸಬಾರದು.** ●

## ಸರಳ ಯೋಗಾಭ್ಯಾಸ

### ಅರ್ಧಕಟಿ ಚಕ್ರಾಸನ

(Lateral Arc Pose)

ಕಟಿ ಎಂದರೆ ನಡು ಅಥವಾ ಸೊಂಟ ಎಂದು ಅರ್ಥ. ಅರ್ಧ ಚಕ್ರದ ಆಕಾರದಲ್ಲಿ ಸೊಂಟವನ್ನು ಬಾಗಿಸುವ ವಿಧಾನ ಆದ್ದರಿಂದ ಈ ಆಸನಕ್ಕೆ ಅರ್ಧಕಟಿ ಚಕ್ರಾಸನ ಎಂದು ಕರೆಯುತ್ತಾರೆ.

**ಆಸನ ಮಾಡುವ ರೀತಿ** 1. ಮೊದಲನೆಯದಾಗಿ ಪಾದಗಳನ್ನು ಜೋಡಿಸಿ ನೇರವಾಗಿ ಸಮಸ್ಥಿತಿಯಲ್ಲಿ ನಿಂತುಕೊಳ್ಳಬೇಕು. 2. ಉಸಿರನ್ನು ಒಳಗೆ ತೆಗೆದುಕೊಳ್ಳುತ್ತ ಬಲಗೈಯನ್ನು ನೇರವಾಗಿ ತಲೆಯಮೇಲೆ ಎತ್ತುವುದು. ಬಲ ತೋಳು ಬಲ ಕಿವಿಯನ್ನು ಸ್ಪರ್ಶಿಸಬೇಕು. 3. ಜೊತೆಗೆ ಎಡಗೈಯನ್ನು ಎಡ ತೊಡೆಯಮೇಲೆ ನೇರವಾಗಿ ಇರಿಸಬೇಕು. 4. ನಂತರ ಉಸಿರನ್ನು ಬಿಡುತ್ತ ನಿಧಾನವಾಗಿ ಎಡಬದಿಯಲ್ಲಿ ಬಾಗಬೇಕು. 5. ದೀರ್ಘ ಉಸಿರಾಟದ ಕ್ರಿಯೆಯಲ್ಲಿ 20- 30 ಸೆಕೆಂಡುಗಳು ಈ ಭಂಗಿಯಲ್ಲಿ ಇದ್ದು ತದನಂತರ ಮತ್ತೆ ಸಮಸ್ಥಿತಿಗೆ ಬರುವುದು. 6. ಇದನ್ನು ಇನ್ನೊಂದು ಬದಿಯಲ್ಲಿಯೂ ಕೂಡ ಅಭ್ಯಾಸ ಮಾಡಬೇಕು. 7. ಈ ಆಸನವನ್ನು 3- 5 ಬಾರಿ ನಿಧಾನವಾಗಿ ಮಾಡಬಹುದು. 8. ಕೊನೆಯಲ್ಲಿ ಸಮಸ್ಥಿತಿಯಲ್ಲಿ ಕೊಂಚ ಕಾಲ ವಿಶ್ರಮಿಸುವುದು.




**ಆಸನದ ಪ್ರಯೋಜನಗಳು**- 1. ಸರಳವಾದ ಈ ಆಸನದಿಂದ ಬೆನ್ನು, ಭುಜ ಮತ್ತು ಕುತ್ತಿಗೆ ಭಾಗ ಬಲಗೊಳ್ಳುತ್ತದೆ. 2. ಹೊಟ್ಟೆಯ ಸುತ್ತಮುತ್ತಲಿನ ಕೊಬ್ಬಿನ ಅಂಶವನ್ನು ಕರಗಿಸಲು ಉತ್ತಮ ಆಸನ. 3. ಈ ಆಸನ ಪಿತ್ತಕೋಶವನ್ನು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಸಹಾಯ ಮಾಡುತ್ತದೆ. 4. Thyroid ಸಮಸ್ಯೆಗೆ ಇದೊಂದು ಒಳ್ಳೆಯ ಆಸನ 5. ಎದೆಗೂಡು ಮತ್ತು ಶ್ವಾಸಕೋಶದ ಕ್ರಿಯೆಗೆ ಸಹಾಯಕವಾಗಿರುತ್ತದೆ. 6. ಸಾಮಾನ್ಯ ಬೆನ್ನು ನೋವನ್ನು ಈ ಆಸನದಿಂದ ನಿಯಂತ್ರಿಸಬಹುದು. 7. ಮಲಬದ್ಧತೆ ತೊಂದರೆ ನಿವಾರಣೆಗೆ ಈ ಆಸನ ಸಹಾಯ ಮಾಡುತ್ತದೆ.

**ಎಚ್ಚರಿಕೆ ವಹಿಸಬೇಕಾದವರು**- 1. Slip disc, Hernia ಸಮಸ್ಯೆ ಇರುವ ಸಮಯದಲ್ಲಿ ಹಾಗೂ ಗರ್ಭಿಣಿಯರು ಈ ಆಸನವನ್ನು ಮಾಡಬಾರದು. 2. ಬೆನ್ನು ನೋವು ಇದ್ದಾಗ ತೀವ್ರಗತಿಯಲ್ಲಿ ಈ ಆಸನ ಮಾಡಬಾರದು. 3. ಹೊಟ್ಟೆ ಭಾಗದಲ್ಲಿ ಶಸ್ತ್ರ ಚಿಕಿತ್ಸೆ ಆದವರು ಈ ಆಸನ ಮಾಡಬಾರದು. 4. ಸೊಂಟ, ಮಂಡಿ ಮತ್ತು ಭುಜದಲ್ಲಿ ಗಾಯಗೊಂಡವರು ಎಚ್ಚರಿಕೆ ವಹಿಸಬೇಕು ಮತ್ತು ತಜ್ಞರ ಸಲಹೆ ಪಡೆಯಬೇಕು

ಎಸ್. ರಾಘವೇಂದ್ರ ಪ್ರಸಾದ್
ಅಧ್ಯಕ್ಷರು - ಸಹಬಾಳ್ವೆ

ವ್ಯಕ್ತಿ ವಿಶೇಷ ಮಾಲಿಕೆ

# ಮತ್ತೊಬ್ಬ ಮಹಾತ್ಮ – ಸ್ವಾಮಿ ಶ್ರದ್ಧಾನಂದ ಸರಸ್ವತಿ



1926 ಡಿಸೆಂಬರ್ 23, ಸ್ವಾಮಿ ಶ್ರದ್ಧಾನಂದರ ಬನಾರಸ್ ಯಾತ್ರೆಯ ಕೊನೆಯ ದಿನ, ಅದು ಅವರ ಜೀವನ ಯಾತ್ರೆಯ ಕೊನೆಯ ದಿನವೂ ಆಗಿದ್ದು ದುರಂತ. ಎಪ್ಪತ್ತು ವರ್ಷದ ಸ್ವಾಮೀಜಿ ನ್ಯುಮೋನಿಯಾ ಕಾಯಿಲೆಗೆ ತುತ್ತಾಗಿ ಬಳಲಿದ್ದರು. ಸಂಜೆ, ಸುಮಾರು ನಾಲ್ಕು ಗಂಟೆಯ ವೇಳೆಗೆ ಅಬ್ದುಲ್ ರಶೀದ್ ಎಂಬ ವ್ಯಕ್ತಿ ಇಸ್ಲಾಂ ಧರ್ಮವನ್ನು ತ್ಯಜಿಸಿ ಮಾತೃಧರ್ಮಕ್ಕೆ ಮರಳುವ ಇಚ್ಛೆ ವ್ಯಕ್ತಪಡಿಸಿ ಸ್ವಾಮೀಜಿಯನ್ನು ಭೇಟಿಯಾಗಲು ಬಂದ. ಸ್ವಾಮೀಜಿಯ ಅನಾರೋಗ್ಯದ ಹಿನ್ನೆಲೆಯಲ್ಲಿ ಭೇಟಿಯನ್ನು ಎಷ್ಟೇ ನಿರಾಕರಿಸಿದರೂ ಆತ ಪಟ್ಟು ಹಿಡಿದಿದ್ದನ್ನು ಗಮನಿಸಿ, ಅವನನ್ನು ಭೇಟಿಯಾದ ಸ್ವಾಮೀಜಿಯವರು "ತಾವು ಈಗ ಏನೂ ಮಾಡುವ ಸ್ಥಿತಿಯಲ್ಲಿಲ್ಲ, ಆದರೆ ಮುಂದೆ ಸಹಾಯ ಮಾಡುತ್ತೇನೆ" ಎಂದು ಭರವಸೆ ನೀಡಿದರು. ಅಬ್ದುಲ್ ರಶೀದ್ ಹೊರಗೆ ಹೋಗುವ ಮೊದಲು ಬಾಯಾರಿಕೆಗೆ ನೀರು ಕೇಳಿದ. ಸ್ವಾಮೀಜಿಯವರ ಸಹಾಯಕ ಧರಮ್ ಸಿಂಗ್ ನೀರು ತರಲು ತಿರುಗಿದ ಕ್ಷಣದಲ್ಲಿ ಅಬ್ದುಲ್ ತಾನು ಬಚ್ಚಿಟ್ಟುಕೊಂಡಿದ್ದ ಪಿಸ್ತೂಲಿನಿಂದ ಸ್ವಾಮೀಜಿಯವರ ಎದೆಗೆ ಎರಡು ಗುಂಡು ಹಾರಿಸಿದ. ಸ್ವಾಮಿ ಶ್ರದ್ಧಾನಂದರ ಪ್ರಾಣಪಕ್ಷಿ ಹಾರಿ ಹೋಯಿತು. ಸ್ವಾಮೀಜಿಯ ರಕ್ಷಣೆಗೆ ಬಂದ ಧರಮ್ ಸಿಂಗ್ ತೊಡೆಗೆ ಗುಂಡು ಹಾರಿಸಿದ, ಕೊಲೆಗಾರ. ಗುಂಡಿನ ಸಪ್ಪಳ ಕೇಳಿಸಿಕೊಂಡ ಸ್ವಾಮೀಜಿಯವರ ಕಾರ್ಯದರ್ಶಿ, ಧರಮ್ ಪಾಲ್, ಅಬ್ದುಲ್ ರಶೀದನನ್ನು ಸೆರೆಹಿಡಿದು ಪೋಲೀಸರಿಗೊಪ್ಪಿಸಿದರು.

ಅಂದಿನ ಕಾಲದಲ್ಲಿ ಕಾಂಗ್ರೆಸ್ಸಿನ ಅತ್ಯಂತ ದೊಡ್ಡ ನಾಯಕರಲ್ಲಿ ಒಬ್ಬರಾಗಿದ್ದ ಶ್ರದ್ಧಾನಂದರ ಬರ್ಬರ ಹತ್ಯೆಯನ್ನು ಗಾಂಧೀಜಿಯೂ ಸೇರಿದಂತೆ ಯಾವ ಕಾಂಗ್ರೆಸ್ ಮುಖಂಡರೂ ಖಂಡಿಸಲಿಲ್ಲ. ಕೊಲೆಗಾರನನ್ನು ಸಹೋದರ ಎಂದು ಕರೆದು ಹಿಂದೂಗಳು ಅವನನ್ನು ಕ್ಷಮಿಸಬೇಕೆಂದು ಗಾಂಧೀಜಿ ಕರೆ ನೀಡಿದರೆ, ಹಿಂದೂಗಳ ಹತ್ಯೆಯನ್ನು ಲಘುವಾಗಿ ಪರಿಗಣಿಸುವ ಗಾಂಧೀಜಿಯ ಇಬ್ಬಗೆಯ ನಿಲುವನ್ನು ಅಂಬೇಡ್ಕರ್ ಕೂಡ ಕಠಿಣ ಶಬ್ದಗಳಲ್ಲಿ ಟೀಕಿಸಿದ್ದರು.

ಆರ್ಯಸಮಾಜದ ಸ್ಥಾಪಕ ಸ್ವಾಮಿ ದಯಾನಂದ ಸರಸ್ವತಿಯವರ ಪರಮಶಿಷ್ಯ, ಸ್ವಾಮಿ ಶ್ರದ್ಧಾನಂದರು. ಇವರ ಪೂರ್ವಾಶ್ರಮದ ಹೆಸರು ಮುನ್ಶೀರಾಮ್ ವಿಜ್. ತಮ್ಮ ಜೀವಿತ ಕಾಲದಲ್ಲಿ ಮಹಾತ್ಮಾ ಮುನ್ಶೀರಾಮ್ ಎಂದು ಹೆಸರುವಾಸಿಯಾಗಿದ್ದ ಇವರು ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳುವ ಮೊದಲೇ ಉತ್ತರಭಾರತದಲ್ಲಿ ಜನಪ್ರಿಯ ಆಧ್ಯಾತ್ಮಿಕ ನಾಯಕರಾಗಿದ್ದರು. ಗಾಂಧೀಜಿಗೆ ಇವರ ಖ್ಯಾತಿಯ ಅರಿವಿದ್ದುದರಿಂದಲೇ ಭಾರತಕ್ಕೆ ಮರಳಿದ ಕೂಡಲೇ ಮೊತ್ತಮೊದಲು ಶಾಂತಿನಿಕೇತನದ ಗುರುದೇವ ರವೀಂದ್ರನಾಥ ಠಾಗೋರ್ ಮತ್ತು ಸೈಂಟ್ ಸ್ಟೀಫನ್ ಕಾಲೇಜಿನ ಪ್ರಾಂಶುಪಾಲ ಶ್ರೀ ರುದ್ರರ ಜೊತೆ ಇವರನ್ನೂ ಭೇಟಿಯಾದರು. ಗಾಂಧೀಜಿ ಕಾಂಗ್ಡಿಯಲ್ಲಿನ ಗುರುಕುಲದಲ್ಲಿ ಅವರನ್ನು ಭೇಟಿಯಾಗಿ, "ಅತ್ಯಂತ ಪ್ರಶಾಂತವಾದ ಸ್ಥಳದಲ್ಲಿ ಭವ್ಯವಾಗಿ, ದೃಢತೆಯಿಂದ ತಲೆಯೆತ್ತಿ ನಿಂತಿರುವ ಪರ್ವತ, ಈ ಮುನ್ಶೀರಾಮ್" ಎಂದು ಹೇಳಿದ್ದರು. ಈ ರೀತಿಯ ಗಾಂಧಿ, ಮುಂದೆ ಶ್ರದ್ಧಾನಂದರ ಹತ್ಯೆಯ ಬಗ್ಗೆ ಮೌನ ತಳೆಯಲು ಕಾರಣವನ್ನೂ ತಿಳಿಯಬೇಕು.

ಹತ್ತೊಂಬತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಆಂಗ್ಲರು ಮತ್ತು ಇತರ ಮುಸ್ಲಿಂ ರಾಜರ ಬೆಂಬಲದಿಂದ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಗೆ ಬಲವಂತದ ಮತಾಂತರಗಳನ್ನು ಅಗಾಧ ಪ್ರಮಾಣದಲ್ಲಿ ನಡೆಸಲಾಗುತ್ತಿತ್ತು. ಇವುಗಳನ್ನು ವಿರೋಧಿಸಿ, ಹಿಂದೂ ಮಹಾಸಭಾ, ಆರ್ಯಸಮಾಜ ಮುಂತಾದ ಸಂಘಟನೆಗಳು ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದವು. ಆರ್ಯಸಮಾಜವು ಬೃಹತ್ ಪ್ರಮಾಣದಲ್ಲಿ ಮತಾಂತರಗೊಂಡ ವ್ಯಕ್ತಿಗಳನ್ನು "ಶುದ್ಧಿ" ಕಾರ್ಯಕ್ರಮದ ಮೂಲಕ ಯಶಸ್ವಿಯಾಗಿ ಮರು ಮತಾಂತರ ಮಾಡುತ್ತಿತ್ತು. ಮತಾಂತರಕ್ಕೆ ಸುಲಭದ ತುತ್ತು, ದಲಿತರು. ಆದುದರಿಂದ ಸಮಾಜದಲ್ಲಿ ದಲಿತರ ಸ್ಥಾನಮಾನಕ್ಕಾಗಿ ಸ್ವಾಮಿ ಶ್ರದ್ಧಾನಂದರು ಕೆಲಸ ಮಾಡುತ್ತಿದ್ದರು. ಅವರ ಆರ್ಥಿಕ ಸ್ವಾವಲಂಬನೆಗಾಗಿ, ಸಾಮಾಜಿಕ ಸಮಾನತೆಗಾಗಿ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಆದರೆ, ಗಾಂಧೀಜಿ ನೇತೃತ್ವದ ಕಾಂಗ್ರೆಸ್ಸಿಗೆ ಸ್ವಾತಂತ್ರ್ಯವೇ ಮೊದಲ ಗುರಿಯಾಗಿತ್ತೇ ಹೊರತು, ಸಮಾಜಸುಧಾರಣೆಯಲ್ಲ. ಆ ಕಾಲದ ಮುಸ್ಲಿಂ ನಾಯಕರು ಹಿಂದೂ ಧರ್ಮದ ವಿರುದ್ಧ ಬೆಂಕಿಯನ್ನೇ ಉಗುಳುತ್ತಿದ್ದರೂ ಕಾಂಗ್ರೆಸ್ ಅವರ ತುಷ್ಟೀಕರಣಕ್ಕೆ ಮುಂದಾಗಿತ್ತು. 1922ರ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಗಾಂಧೀಜಿಯವರು "ಶ್ರದ್ಧಾನಂದರ ಭಾಷಣಗಳು ಜನರನ್ನು ಕೆರಳಿಸುತ್ತವೆ, ಪ್ರತಿಯೊಬ್ಬ ಮುಸ್ಲಿಮೇತರರನೂ ಒಂದಲ್ಲ ಒಂದು ದಿನ ಮುಸ್ಲಿಂ ಆಗುವುದು ನಿಶ್ಚಿತ ಎಂದು ಮುಸ್ಲಿಮರು ತಿಳಿಯುವಂತೆ ಶ್ರದ್ಧಾನಂದರೂ ಪ್ರತಿಯೊಬ್ಬ ಮುಸ್ಲಿಮನೂ ಆರ್ಯಧರ್ಮವನ್ನು ಸ್ವೀಕರಿಸುತ್ತಾನೆ ಎಂದು ಭಾವಿಸುತ್ತಾರೆ. ಇದು ಹಿಂದೂ ಮತ್ತು ಮುಸ್ಲಿಮರ ನಡುವೆ ವೈಮನಸ್ಯವನ್ನು ಹೆಚ್ಚಿಸುತ್ತದೆ, ಅವರು ವಿಶ್ವದ ಅತ್ಯಂತ ಉದಾರ ಧರ್ಮವನ್ನು ಸಂಕುಚಿತಗೊಳಿಸಿದರು" ಎಂದು ಬರೆದಿದ್ದರು.

ಗಾಂಧೀಜಿಯವರು ಮಾರ್ಚ್ 4, 1919ರಂದು ಶ್ರದ್ಧಾನಂದರನ್ನು ಭೇಟಿಯಾದರು. ಅಂದಿನಿಂದಲೇ ಶ್ರದ್ಧಾನಂದರು ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಸಕ್ರಿಯರಾದರು. ಅದೇ ತಿಂಗಳಲ್ಲಿ ಬ್ರಿಟಿಷ್ ಸರಕಾರವು ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ರೌಲೆಟ್ ಕಾಯಿದೆಯನ್ನು ಜಾರಿಗೆ ತಂದಿತ್ತು. ಶ್ರದ್ಧಾನಂದರು ಬೊಂಬಾಯಿ, ಬರೋಡ, ಸೂರತ್, ಭರೂಚ್ ಮತ್ತು ಅಹಮದಾಬಾದ್ ಗಳಲ್ಲಿ ಬೃಹತ್ ಸಭೆಗಳನ್ನುದ್ದೇಶಿಸಿ ಮಾತನಾಡಿದರು. 30 ಮಾರ್ಚ್ 1919ರಂದು ದೆಹಲಿಯ ಚಾಂದನಿ ಚೌಕ್ ಮತ್ತು ರೈಲ್ವೇ ನಿಲ್ದಾಣಗಳಲ್ಲಿ ನಡೆದ ಬೃಹತ್ ಶಾಂತಿಯುತ ಪ್ರತಿಭಟನಾ ಮೆರವಣಿಗೆಯ ಮೇಲೆ ಗುಂಡು ಹಾರಿಸಲಾಯಿತು. ಐವರು ಗುಂಡೇಟಿಗೆ ಬಲಿಯಾದರು, ಹದಿನಾಲ್ಕು ಜನ ಗಾಯಗೊಂಡರು. ಜನ ರೊಚ್ಚಿಗೆದ್ದರು. ಇದನ್ನು ಗಮನಿಸಿದ ಶ್ರದ್ಧಾನಂದರು ಎರಡೂ ಸ್ಥಳಗಳಿಗೆ ಧಾವಿಸಿದರು. ಪೇಪಲ್ ಪಾರ್ಕಿನಲ್ಲಿ ಒಂದು ಶಾಂತಿಯುತ ಸಭೆಯನ್ನು ನಡೆಸಿ ಬೃಹತ್ ಸಂಖ್ಯೆಯಲ್ಲಿ ತಮ್ಮ ಅನುಯಾಯಿಗಳೊಂದಿಗೆ ಮರಳುತ್ತಿದ್ದಾಗ ಚಾಂದನಿ ಚೌಕಿನಲ್ಲಿ ಎದುರಿನಿಂದ ಬಂದ ಮಣಿಪುರಿ ಸೈನಿಕರು ಅಕಸ್ಮಾತಾಗಿ ಒಂದು ಗುಂಡು ಹಾರಿಸಿದರು. ಈಗಂತೂ ಜನರು ರೊಚ್ಚಿಗೆದ್ದು ಸೈನಿಕರತ್ತ ಧಾವಿಸಿದರು. ತಬ್ಬಿಬ್ಬಾದ ಸೈನಿಕರು ಗುಂಡು ಹಾರಿಸಲು ಕೋವಿಗಳನ್ನು ಗುರಿ ಹಿಡಿದರು. ಆಗ ನೇರವಾಗಿ ಸೈನಿಕರ ಎದುರಿಗೆ ಬಂದ ಶ್ರದ್ಧಾನಂದರು, ಮೊದಲು ತಮ್ಮ ಮೇಲೆ ಗುಂಡು ಹಾರಿಸಿ ಎಂದು ಎದೆಯೊಡ್ಡಿ ನಿಂತರು. ಮಣಿಪುರಿ ಸೈನಿಕರಿಗೆ ಹಿಂದಿ ಬರುತ್ತಿರಲಿಲ್ಲ. ಅದೇ ಸಮಯಕ್ಕೆ ಅಲ್ಲಿಗೆ ಆಗಮಿಸಿದ ಹಿರಿಯ ಯುರೋಪಿಯನ್ ಅಧಿಕಾರಿಯು ಮಧ್ಯೆ ಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ. ಸನ್ಯಾಸಿಯೊಬ್ಬನ ಈ ನೈತಿಕ ಸ್ಥೈರ್ಯ ದೇಶದಾದ್ಯಂತ ಮನೆಮಾತಾಯಿತು.

ಗಾಂಧೀಜಿಯವರ ತಮ್ಮ ಮೂಗಿನ ನೇರಕ್ಕೆ ನಡೆಯುವ ಹಠಮಾರಿ ಕಾರ್ಯವಿಧಾನ ಶ್ರದ್ಧಾನಂದರಿಗೆ ಇಷ್ಟವಾಗಲಿಲ್ಲ. ಅದರಲ್ಲಿಯೂ ಖಿಲಾಫತ್ ಚಳವಳಿ ಮತ್ತು ಮೋಪ್ಲಾ ದಂಗೆಯ ಕುರಿತು ಗಾಂಧೀಜಿಯವರ ನಿಲುವು ಅವರಿಗೆ ಹಿಡಿಸಿರಲಿಲ್ಲ. ಜೊತೆಗೆ ಸ್ವದೇಶೀ ಚಳುವಳಿಯ ಸಂದರ್ಭದಲ್ಲಿ ವಿಲಾಯಿತಿ ಬಟ್ಟೆಗಳನ್ನು ಸುಡುವಂತೆ ಕರೆಕೊಟ್ಟ ಗಾಂಧೀಜಿ, ಆ ಬಟ್ಟೆಗಳನ್ನು ಸಂಗ್ರಹಿಸಿ ಟರ್ಕಿ ದೇಶಕ್ಕೆ ಕಳಿಸಿಕೊಡಲು ಮುಸ್ಲಿಮರಿಗೆ ಅನುಮತಿ ನೀಡಿದ್ದು ಶ್ರದ್ಧಾನಂದರನ್ನು ಕೆರಳಿಸಿತು. ನಮ್ಮ ದೇಶದ ಮಕ್ಕಳನ್ನು ನಗ್ನತೆಯತ್ತ ದೂಡಿ ಅದೇ ಬಟ್ಟೆಗಳನ್ನು ಟರ್ಕಿದೇಶಕ್ಕೆ ಕಳಿಸುವ ಧೋರಣೆಯನ್ನು ಕಟುವಾಗಿ ಟೀಕಿಸಿ ಅವರು ಕಾಂಗ್ರೆಸಿನಿಂದ ಪ್ರತ್ಯೇಕವಾಗಿ ತಮ್ಮದೇ ರೀತಿಯಲ್ಲಿ ಸಮಾಜಸುಧಾರಣೆಯತ್ತ ತಮ್ಮ ಗಮನ ಹರಿಸಿದರು.

ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಮಹತ್ವ ನೀಡಿದ ಶ್ರದ್ಧಾನಂದರು ಕನ್ಯಾಮಹಾ ವಿದ್ಯಾಲಯವನ್ನು ಸ್ಥಾಪಿಸಿ ಕನ್ಯಾ ಶಾಲೆಗಳನ್ನು ತೆರೆದರು. ಪರದಾ ಪದ್ಧತಿಯನ್ನು ವಿರೋಧಿಸಿದರು. ಹರಿದ್ವಾರದ ಬಳಿ ಕಾಂಗಡಿಯಲ್ಲಿ ಗುರುಕುಲವನ್ನು ತೆರೆದರು. ಅಲ್ಲಿ ಧನುರ್ವಿದ್ಯೆ, ಕತ್ತಿವರಸೆ, ಕುದುರೆ ಸವಾರಿಗಳನ್ನೂ ಕಲಿಸಿ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾದರು. ದಲಿತರಿಗೆ ಸಮಾನತೆ ದೊರಕಿಸಿಕೊಡಲು ಹೋರಾಡಿದ್ದಲ್ಲದೆ ಮತಾಂತರಗೊಂಡ ಸಾವಿರಾರು ಮುಸ್ಲಿಮರನ್ನು ಮಾತೃಧರ್ಮಕ್ಕೆ ಮರಳಿ ಕರೆತಂದರು. ಈ ನಿಟ್ಟಿನಲ್ಲಿ ದೆಹಲಿಯ ಜಾಮಾ ಮಸೀದಿಯೂ ಸೇರಿದಂತೆ ಅನೇಕ ಮಸೀದಿಗಳಲ್ಲಿ ವೇದಘೋಷ ಸಹಿತವಾಗಿ ಉಪನ್ಯಾಸ ನೀಡಿದರೆಂದರೆ ಅವರ ಜನಪ್ರಿಯತೆಯ ಅರಿವಾಗುತ್ತದೆ. ಭಾರತೀಯ ಹಿಂದೂ ಶುದ್ಧಿ ಸಭಾದ ಅಧ್ಯಕ್ಷರಾಗಿ 163000 ಮಲ್ಕಾನಾ ಮುಸ್ಲಿಮರನ್ನು ಹಿಂದೂ ಧರ್ಮಕ್ಕೆ ಮರಳಿ ಕರೆತಂದರು. ತಮ್ಮ ವಿಚಾರಗಳ ಪ್ರಚಾರಕ್ಕಾಗಿ ಸದ್ಧರ್ಮ ಪ್ರಚಾರಕ ಎಂಬ ವಾರಪತ್ರಿಕೆಯನ್ನೂ ಪ್ರಾರಂಭಿಸಿದರು.

22 ಫೆಬ್ರವರಿ 1856ರಲ್ಲಿ ಪಂಜಾಬಿನ ಜಲಂಧರ ಜಿಲ್ಲೆಯ ತಲವಾನ್ ಎಂಬಲ್ಲಿ ಜನಿಸಿದ ಮುನ್ಶಿರಾಮ್ ವಕೀಲಿ ವೃತ್ತಿಯನ್ನು ಪ್ರಾರಂಭಿಸಿ ಕ್ರಾಂತಿಕಾರಿಗಳ ಪರವಾಗಿ ವಾದಿಸುತ್ತಿದ್ದರು. 1917ರಲ್ಲಿ ಸನ್ಯಾಸ ಸ್ವೀಕರಿಸಿ, ಶ್ರದ್ಧಾನಂದ ಸರಸ್ವತಿಯಾದರು. ಮಹಾತ್ಮಾ ಗಾಂಧಿಯವರ ಇಬ್ಬರು ಮಕ್ಕಳಿಗೆ ಇವರು ಆಶ್ರಯ ನೀಡಿದ್ದರು. ಪ್ರಖ್ಯಾತ ಚಲನಚಿತ್ರ ತಾರೆ ತಬಸ್ಸುಮ್ ತಾಯಿಯೂ ಕೂಡ ಶ್ರದ್ಧಾನಂದರ ಮೂಲಕವೇ ಹಿಂದೂ ಧರ್ಮಕ್ಕೆ ಮರಳಿದ್ದರು.

ಪ್ರತಿಯೊಬ್ಬ ಭಾರತೀಯನೂ ಇಂದು ಅಗತ್ಯವಾಗಿ ಸ್ಮರಿಸಿಕೊಂಡು ತನ್ನ ಆದರ್ಶವೆಂದು ಭಾವಿಸಬೇಕಾಗಿರುವ ಶ್ರದ್ಧಾನಂದರನ್ನು ಡಾ. ಬಿ. ಆರ್. ಅಂಬೇಡ್ಕರ್ **"ಅಸ್ಪೃಶ್ಯರ ಅತ್ಯುನ್ನತ ಮತ್ತು ಅತ್ಯಂತ ಪ್ರಾಮಾಣಿಕ ಹಿತೈಷಿ"** ಎಂದು 1922ರಲ್ಲಿ ಬಣ್ಣಿಸಿದ್ದರು. ●

**-ಕೆ. ಜನಾರ್ದನ ತುಂಗ**

# ಅದಮ್ಯಚೇತನ ತಿಂಗಳ ವರದಿ (15 ನವೆಂಬರ್ 2022 ರಿಂದ 15 ಡಿಸೆಂಬರ್ 2022)



**ಸಿರಿಧಾನ್ಯ ಮೇಳಕ್ಕೆ ಚಾಲನೆ**

ಸೌತ್ ಎಂಡ್ ವೃತ್ತದ ಅನಂತ ಪ್ರೇರಣಾ ಕೇಂದ್ರದಲ್ಲಿ ಅದಮ್ಯ ಚೇತನದ ವತಿಯಿಂದ ಪೌಷ್ಟಿಕ ಸಾತ್ವಿಕ ಆಹಾರ ಆಂದೋಲನಕ್ಕೆ ಅನಂತಕುಮಾರರ ಸಹೋದರಿ, ಶ್ರೀಮತಿ ಸುಹಾಸಿನಿ ನಾರಾಯಣ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅದಮ್ಯ ಚೇತನದ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾತನಾಡಿ, ವಿಶ್ವದ ಪೌಷ್ಟಿಕ ಆಹಾರ ಪದ್ಧತಿಯಲ್ಲಿ ಭಾರತವು 103ನೇ ಸ್ಥಾನದಲ್ಲಿರುವುದು ವಿಷಾದನೀಯ ಸಂಗತಿ, ಆಧುನಿಕ ಜೀವನ ಶೈಲಿ, ನಗರೀಕರಣದಿಂದಾಗಿ ಜನರು ದಿಢೀರ್ ಆಹಾರಗಳಾದ ಪಿಜ್ಜಾ, ಬರ್ಗರ್‌ಗಳಿಗೆ ಮನಸೋತು ಸಾಂಪ್ರದಾಯಿಕ ಆಹಾರ ಕ್ರಮಗಳನ್ನೇ ಮರೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಸಿರಿಧಾನ್ಯ, ಪೌಷ್ಟಿಕ ಸಾತ್ವಿಕ ಆಹಾರ ಪದ್ಧತಿಯ ಅರಿವು ಮೂಡಿಸಬೇಕಿರುವುದು ಅನಿವಾರ್ಯವಾಗಿದೆ ಎಂದರು.

ಇಂದು ಪೌಷ್ಟಿಕ ಆಹಾರದ ಕೊರತೆಯಿಂದ ಅನೇಕ ಕಾಯಿಲೆ ಶುರುವಾಗಿದೆ. ಒಂದು ತಿಂಗಳಿಗೆ ನಮ್ಮ ದೇಹಕ್ಕೆ ಎಷ್ಟು ಪೌಷ್ಟಿಕ ಆಹಾರ ಸೇವಿಸಬೇಕೆಂಬುದನ್ನು ತಿಳಿದು, ಆಹಾರ ಸೇವನೆ ಮಾಡಬೇಕು ಈ ನಿಟ್ಟಿನಲ್ಲಿ, ಪ್ರತಿ ಶನಿವಾರ ಅನಂತ ಪ್ರೇರಣಾ ಕೇಂದ್ರದಲ್ಲಿ ಸಿರಿಧಾನ್ಯ ಮೇಳ ನಡೆಯುತ್ತಿದೆ. ಬೆಲ್ಲ, ಕಡ್ಲೆಕಾಳು, ಹೆಸರು ಕಾಳು, ಸಾಮೆ, ನವಣೆ, ಹುರುಳಿ ಕಾಳು, ಅಗಸೆ ಸೇರಿದಂತೆ ಸಿರಿಧಾನ್ಯಗಳನ್ನು ಸಗಟು ದರದಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಅಮೂಲ್ಯ, ಶಿವಲೀಲಾ, ಮನೋಹರಿ, ಶೀಲಾ, ವನಿತಾ ಹೆಗಡೆ, ಸುಜಾತಾ ಮತ್ತು ವಿಶಾಲಾಕ್ಷಿ ಉಪಸ್ಥಿತರಿದ್ದರು.

**ಹಸಿರು ಭಾನುವಾರ**

360, 361 ಮತ್ತು 362ನೇ ಹಸಿರು ಭಾನುವಾರಗಳನ್ನು ಕ್ರಮವಾಗಿ, ಎನ್‌ಎಸ್‌ಎಸ್ ಭವನದ ಹಿಂಭಾಗದ ಬಯೋ ಪಾರ್ಕ್ ನಲ್ಲಿ, ಬನಶಂಕರಿಯ 6ನೇ ಹಂತದ ಪವಮಾನಪುರದಲ್ಲಿ ರಸ್ತೆ ಬದಿಗಳಲ್ಲಿ ನಡೆಸಲಾಯಿತು. ಜೊತೆಗೆ, ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಭವನದ ಬಯೋ ಪಾರ್ಕ್ ಆವರಣದಲ್ಲಿ ಈ ಹಿಂದೆ ನೆಟ್ಟ ಸಾವಿರ ಗಿಡಗಳಿಗೆ ನೀರು ಹಾಕುವ ಕೆಲಸವನ್ನು ಬಿಎಂಎಸ್, ವೈಎಫ್‌ಎಸ್ ಹಾಗೂ ಎಸಿಎಸ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸ್ವಯಂ ಸೇವಕರು ನೆರವೇರಿಸಿದರು.

**ಗಣ್ಯರ ಭೇಟಿ**

ಅದಮ್ಯ ಚೇತನಕ್ಕೆ ಕೂಡಲಸಂಗಮದಿಂದ ಸ್ವಾಮೀಜಿಗಳು ಅನ್ನಪೂರ್ಣ ಅಡುಗೆ ಮನೆಗೆ ಭೇಟಿ ನೀಡಿ ತೇಜಸ್ವಿನಿ ಅನಂತಕುಮಾರ ಅವರನ್ನು ಗೌರವಿಸಿದರು. ಅದಮ್ಯ ಚೇತನದ ಹಿತೈಷಿಗಳಾದ ಯುವರಾಜ್, ಬಸವರಾಜ್, ರಾಜಶೇಖರ್, ನರಸಿಂಹಲು ಹಾಗೂ ರಾಚಪ್ಪ, ವಿಜಯಲಕ್ಷ್ಮಿ, ಕೃಷ್ಣ ಕುಮಾರ ಹಾಗೂ ಸುಧಾಕರ್ ಎಂ., ಮಧ್ಯಪ್ರದೇಶದ ಇಂದಿರಾ ಗಾಂಧಿ ನ್ಯಾಷನಲ್ ಟ್ರೈಬಲ್ ವಿಶ್ವವಿದ್ಯಾನಿಲಯದ ಜೈವಿಕತಂತ್ರಜ್ಞಾನ ವಿಭಾಗದ ಪ್ರೊ. ಭೂಮಿನಾಥ ತ್ರಿಪಾಠಿ ಹಾಗೂ ಸಸ್ಯಶಾಸ್ತ್ರ ವಿಭಾಗದ ಪ್ರೊ. ನವೀನ್ ಕುಮಾರ್ ಶರ್ಮಾ ಮುಂತಾದ ಗಣ್ಯರು ಅದಮ್ಯ ಚೇತನಕ್ಕೆ ಭೇಟಿ ನೀಡಿ ಅನ್ನಪೂರ್ಣ ಅಡುಗೆ ಮನೆ ವಿಭಾಗವನ್ನು ವೀಕ್ಷಣೆ ಮಾಡಿ ಸಂತೋಷ ವ್ಯಕ್ತ ಪಡಿಸಿದರು.

ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಬೆಂಗಳೂರು ಪ್ರಾದೇಶಿಕ ಕೇಂದ್ರದ ನಿರ್ದೇಶಕರಾದ ಮಹೇಂದ್ರ ಡಿ. ಅವರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ ಫೋಟೋ ಗ್ಯಾಲರಿಯನ್ನು ವೀಕ್ಷಿಸಿದರು.

**ಎ- ಚಾಟ್ ನಲ್ಲಿ ಮೇಳೈಸಿದ ಸಾಂಸ್ಕೃತಿಕ ಕಲರವ**

ಅದಮ್ಯ ಚೇತನದಲ್ಲಿ ನ.26ರಂದು ನಡೆದ ಎ-ಚಾಟ್ ಕಾರ್ಯಕ್ರಮವನ್ನು ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ.ವಿ. ಕೃಷ್ಣಭಟ್ ಉದ್ಘಾಟನೆ ಮಾಡಿದರು.

ಭಾರತ ಮಾತಾ ವಿದ್ಯಾಮಂದಿರ ಶಾಲೆಯ ವಿದ್ಯಾರ್ಥಿಗಳಾದ ವಿಶ್ವಜಾ ಪಾಂಡೆ ಮತ್ತು ಶ್ರಾವಣಿ ಆರ್. ಅವರಿಂದ ಭಗವದ್ಗೀತೆಯ ಶ್ಲೋಕಗಳ ಪಠಣದಿಂದ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ, ಸಹಬಾಳ್ವೆ ಸಂಸ್ಥೆಯ ಅಧ್ಯಕ್ಷ, ಡಾ. ಎಸ್. ರಾಘವೇಂದ್ರ ಪ್ರಸಾದ್ ಪ್ರಾಣಾಯಾಮ ಮತ್ತು ಯೋಗ ಮುದ್ರೆಗಳ ಬಗ್ಗೆ ತಿಳಿಸಿದರು. ಶ್ರೀ ಕಲ್ಲುಂಡಿ ನವೀನ್ ಅವರು ಸ್ಲೈಡುಗಳ ಮೂಲಕ ಪಕ್ಷಿಲೋಕದ ಕಿರು ಪರಿಚಯ ನೀಡಿದರು. ಮೈಸೂರು ಆಕಾಶವಾಣಿಯಲ್ಲಿ ಟಿ.ಎಸ್. ಗೋಪಾಲ್ ಪ್ರಸ್ತುತ ಪಡಿಸಿದ ದೇಗುಲಗಳ ಪರಿಚಯ ಮಾಲಿಕೆಯ ಧ್ವನಿ ಚಿತ್ರವನ್ನು ನಂತರ ಪ್ರದರ್ಶಿಸಲಾಯಿತು. ಕೊನೆಯಲ್ಲಿ, ಪ್ರತಿಭಾವಂತ ಬಾಲ ಕಲಾವಿದೆಯರಾದ ದೀಪಿಕಾ ಎಂ. ಹಾಗೂ ಧನುಶ್ರೀ ಎಂ. ಸಹೋದರಿಯರಿಂದ ಸುಶ್ರಾವ್ಯವಾದ ಗಾಯನ ನಡೆಯಿತು. ಇವರಿಗೆ ಮೃದಂಗದಲ್ಲಿ ಕಾರ್ತಿಕ್ ಪ್ರಣವ್ ಎನ್. ಹಾಗೂ ಪಿಟೀಲಿನಲ್ಲಿ ಮೋಕ್ಷಿತ್ ಜೊತೆ ನೀಡಿದರು.




**ನಿತ್ಯ ಅನ್ನದಾನಕ್ಕೆ ಎರಡು ವರ್ಷ**

ಸುಮಾರು ವರ್ಷಗಳಿಂದ ಅದಮ್ಯ ಚೇತನ ಸಂಸ್ಥೆಯು ಬೆಂಗಳೂರು ದಕ್ಷಿಣ ವಲಯದ ಬೇರೆ ಬೇರೆ ಕಡೆಗಳಲ್ಲಿ ಅಶಕ್ತರಿಗೆ ಅನ್ನದಾನ ಕಾರ್ಯಕ್ರಮವನ್ನು ನಿರಂತರವಾಗಿ ಆಯೋಜನೆ ಮಾಡಿಕೊಂಡು ಬರುತ್ತಿದೆ. ಗವಿಪುರ, ನಗರ್ತಪೇಟೆ, ಸೌತ್ ಎಂಡ್ ವೃತ್ತದ ಅನಂತ ಪ್ರೇರಣಾ ಕೇಂದ್ರಗಳಲ್ಲಿ ಸಾವಿರಾರು ಜನರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಕಲ್ಪಿಸುತ್ತಿದೆ.

ಒಂದು ಹೊತ್ತಿನ ಊಟಕ್ಕೂ ಪರದಾಡುವ ಜನರನ್ನು ಗಮನದಲ್ಲಿರಿಸಿಕೊಂಡು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಜಯನಗರದಲ್ಲಿ ಡಿಸೆಂಬರ್ 2, 2020 ರಂದು ಪ್ರಾರಂಭಿಸಿದ ನಿತ್ಯ ಅನ್ನದಾನ ಕಾರ್ಯಕ್ರಮಕ್ಕೆ ಇದೀಗ 2 ವರ್ಷ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 2ರ ಕಾರ್ಯಕ್ರಮದಲ್ಲಿ ತೇಜಸ್ವಿನಿ ಅನಂತಕುಮಾರ್ ಸ್ವತಃ ಭಾಗವಹಿಸಿದ್ದರು.

**ಇತರ ಚಟುವಟಿಕೆಗಳು**

ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಸಹಯೋಗದಲ್ಲಿ ಅದಮ್ಯ ಚೇತನ ಅಡುಗೆ ಮನೆಯಿಂದ ಪ್ರತಿದಿನ 260 ಶಾಲೆಗಳ ಮಕ್ಕಳಿಗೆ ಬಿಸಿಯೂಟದ ಜೊತೆಗೆ ಪೌಷ್ಟಿಕಾಂಶಯುಕ್ತ ಚಾಕ್ಲೇಟ್ ಹಾಲನ್ನು ಕೊಡಲಾಗುತ್ತಿದೆ. ಪ್ರತಿ ಮಂಗಳವಾರ ಶ್ರೀ ಚೇತನ ಸಭೆಯನ್ನು ಗೂಗಲ್ ಮೀಟ್ ಜಾಲತಾಣದಲ್ಲಿ ನಡೆಸುತ್ತಿದ್ದು, ಪ್ರಾರ್ಥನೆ, ದೇಶಭಕ್ತಿ ಗೀತೆ, ವಾರದ ಸುದ್ದಿ, ಕವಿನಮನ ಮತ್ತು ಆರೋಗ್ಯಕ್ಕೆ ಅಡುಗೆ ಮುಂತಾದ ಕಾರ್ಯಕ್ರಮಗಳು ನಡೆದವು. ಪ್ರತಿ ಗುರುವಾರದ ಭಗವದ್ಗೀತಾ ಪಠಣ ಕಾರ್ಯಕ್ರಮವೂ ನಿರಂತರವಾಗಿ ನಡೆಯುತ್ತಿದೆ.●

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )




361ನೇ ಹಸಿರು ಭಾನುವಾರದಂದು ಅದಮ್ಯ ಚೇತನದ ಅಧ್ಯಕ್ಷರಾದ ತೇಜಸ್ವಿನಿ ಅನಂತಕುಮಾರರವರ ನೇತೃತ್ವದಲ್ಲಿ ಗಿಡಗಳನ್ನು ನೆಡುವ ಚಟುವಟಿಕೆಯ ಸಂದರ್ಭ



ಮಧ್ಯಪ್ರದೇಶದ ಇಂದಿರಾ ಗಾಂಧಿ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಬಯೋಟೆಕ್ನಾಲಜಿ ಪ್ರಾಧ್ಯಾಪಕ ಭೂಮಿನಾಥ ತ್ರಿಪಾಠಿ ಹಾಗೂ ಸಸ್ಯಶಾಸ್ತ್ರ ವಿಭಾಗದ ಪ್ರೊ. ನವೀನ್ ಕುಮಾರ್ ಶರ್ಮಾ ಅವರು ನ. 27ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿದ ಸಂದರ್ಭ



ಬಿ.ಇ.ಎಸ್.ಕನ್ನಡ ಪ್ರೌಢಶಾಲೆಯ ಮಕ್ಕಳು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ ಮೈಕ್ರೋ ಪ್ಲಾಸ್ಟಿಕ್ ಬಗ್ಗೆ ಮಾಹಿತಿ ಪಡೆದುಕೊಂಡರು.



ಜಯನಗರದಲ್ಲಿ ನಡೆಯುತ್ತಿರುವ ನಿತ್ಯ ಅನ್ನದಾನ ಕಾರ್ಯಕ್ರಮವು ಎರಡು ವರ್ಷಗಳನ್ನು ಪೂರೈಸಿದ ಸಂದರ್ಭದ ಚಿತ್ರ



ಕಲಬುರ್ಗಿಯಲ್ಲಿ ಅನಂತಪಥ ಪತ್ರಿಕೆ ಬಿಡುಗಡೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ.ವಿ. ಕೃಷ್ಣಭಟ್ಟ ಮತ್ತು ಅದಮ್ಯ ಚೇತನದ ಅಧ್ಯಕ್ಷರಾದ ತೇಜಸ್ವಿನಿ ಅನಂತಕುಮಾರ್ ಸ್ಥಳೀಯ ಗಣ್ಯರ ಜೊತೆಗೆ ಅನೌಪಚಾರಿಕ ಚರ್ಚೆಯಲ್ಲಿ ತೊಡಗಿದ್ದ ಸಂದರ್ಭ



ಇಸ್ಕಾನ್ ದೇವಸ್ಥಾನದ ನವೀನ್ ಕಿರಣ್ ದಾಸ್ ಮತ್ತಿತರರು ಅದಮ್ಯ ಚೇತನಕ್ಕೆ ಆಗಮಿಸಿ ಅಡುಗೆ ವ್ಯವಸ್ಥೆ ನೋಡಿ ಸಂತೋಷ ವ್ಯಕ್ತ ಪಡಿಸಿದರು.



ಬೆಂಗಳೂರಿನ ಹನುಮಂತ ನಗರದ ಸಂವಿದಾ ಶಾಲೆಯ ಶಿಕ್ಷಕರಾದ ಶೇಷಾಚಲ ಅವರೊಂದಿಗೆ ಸುಮಾರು 34 ವಿದ್ಯಾರ್ಥಿಗಳು ಅದಮ್ಯ ಚೇತನಕ್ಕೆ ಭೇಟಿ ನೀಡಿ ತೇಜಸ್ವಿನಿ ಅನಂತಕುಮಾರ ರೊಂದಿಗೆ ಸಂವಾದ ನಡೆಸಿದರು.




ಜಾರ್ಖಂಡ್ ರಾಜ್ಯದ ಯುವ ರಾಜಕಾರಣಿ, ಬಿಜೆಪಿ ವಕ್ತಾರರಾದ ಶ್ರೀ ಕುಣಾಲ್ ಸಾರಂಗಿಯವರು ಅದಮ್ಯ ಚೇತನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಸತ್ಯಸಾಯಿ ಟ್ರಸ್ಟ್‌ನ ಡಾ. ವರಲಕ್ಷ್ಮೀ, ಇಂದಿರಾ ರಾಷ್ಟ್ರೀಯ ಕಲಾಕೇಂದ್ರದ ಪ್ರಾದೇಶಿಕ ನಿರ್ದೇಶಕರಾದ ಮಹೇಂದ್ರ.ಡಿ ಮತ್ತು ಐಶ್ವರ್ಯಾ ಅನಂತಕುಮಾರ್ ಉಪಸ್ಥಿತರಿದ್ದರು.

## ಅನಂತ ಚಿತ್ರಸಂಪುಟ

ರಾಜಕೀಯ ಮತ್ತು ಆಡಳಿತ ವ್ಯವಹಾರಗಳಲ್ಲಿ ನೈಪುಣ್ಯ ಗಳಿಸುವ ನಿಟ್ಟಿನಲ್ಲಿ ಅನಂತಕುಮಾರ್ ಮೇಲೆ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರ ಪ್ರಭಾವ ಮತ್ತು ಮಾರ್ಗದರ್ಶನ ಅನನ್ಯವಾಗಿದ್ದವು























